ಕ್ರಾಂತಿಯೋಗಿ ಮಹಾದೇವರು

ರಂಜಾನ್ ದರ್ಗಾ



ಕ್ರಾಂತಿಯೋಗಿ ಮಹಾದೇವರು

(ಸದ್ಗುರು ಸಮರ್ಥ ಶ್ರೀ ಮಾಧವಾನಂದ ಪ್ರಭುಜೀ ಮಹಾರಾಜರು)

ರಂಜಾನ್ ದರ್ಗಾ

ಪ್ರಕಾಶಕರು
ಸದ್ಗುರು ಸಮರ್ಥ ಶ್ರೀ ಮಾಧವಾನಂದ ಪ್ರಭುಜೀ
ಜನ್ಮ ಶತಮಾನೋತ್ಸವ ಸಮಿತಿ
ಶ್ರೀ ಗಿರೀಶ ಆಶ್ರಮ
ವಿದ್ಯಾನಗರ ಹುಬ್ಬಳ್ಳಿ -೫೮೦೦೨೧
ಮೊಬೈಲ್: ೮೭೬೨೩೫೦೫೮೭

Krantiyogi Mahadevaru by Ramjan Darga
Siddharoodha Colony, Madihal
Dharwad -580006

First Edition: January 2016

Pages: 32

Price: Rs 10

Published by
Shri Sadguru Samarth Shri Madhavananda Prbhuji
Janma shatamanotsava Samiti
Gireesha Ashram
Vidyanagar, Hubli -580 021
Mobile: 8762350587

ನಮ್ಮ ದೇವರು ಮಹಾದೇವರು

ಸ್ವಾತಂತ್ರ್ಯದ ನಂತರದ ದಿನಗಳಲ್ಲಿ ಮತೀಯ ಸಂಘರ್ಷದ ದಳ್ಳುರಿ ಲಕ್ಷಾವಧಿ ಜನರನ್ನು ಆಪೋಶನ ಮಾಡಿತು. ಮಹಾತ್ಮಾ ಗಾಂಧೀಜಿಯವರ ಸಾಮರಸ್ಯದ ಆಂದೋಲನ ಪ್ರಾರಂಭಗೊಂಡಿತು. ಬಂಗಾಲದ ನೌಖಾಲಿಯಲ್ಲಿ ಹಿಂದು-ಮುಸ್ಲಿಂ ಬಾಂಧವರ ಕಲಹ ಗಾಂಧೀಜಿಯವರನ್ನು ತಲ್ಲಣಗೊಳಿಸಿತು. ಗಾಂಧೀಜಿ ಏಕಾಂಗಿಯಾಗಿದ್ದರು. ಅವರ ಹಿಂಬಾಲಕರೆಲ್ಲ ದೇಶ ಆಳುವ ಹಂಬಲದಲ್ಲಿ ತಲ್ಲೀನರಾಗಿದ್ದರು. "If nobody comes with you, walk alone,walk alone" ನಿನ್ನ ಜೊತೆಗೆ ಯಾರೂ ಬರದಿದ್ದರೂ ನೀನೊಬ್ಬನಾದರೂ ಗುರಿಯೆಡೆಗೆ ನಡೆ ಎಂಬ ಕವಿ ರವೀಂದ್ರನಾಥ ಟಾಗೋರ ಅವರ ನುಡಿಯನ್ನು ಗುನಗುನಿಸುತ್ತಾ ಮಹಾತ್ಮಾಜಿ ಕೆಲವೇ ಶಿಷ್ಯರೊಡನೆ ಬಂಗಾಲದ ನೌಖಾಲಿಯಲ್ಲಿ ಶಾಂತಿ ಪಾದಯಾತ್ರೆ ಕೈಗೊಂಡರು. ಕೊನೆಯದಾಗಿ ೨೧ ದಿನಗಳ ಉಪವಾಸ ಸತ್ಯಾಗ್ರಹ ಪ್ರಾರಂಭಿಸಿದರು. ಉಪವಾಸದ ಕೊನೆಯ ದಿನ ಆಕಾಶವಾಣಿ ಬಾತ್ಮಿದಾರ ಮಹಾತ್ಮಾ ಗಾಂಧೀಜಿಯವರಿಗೆ ಪ್ರಶ್ನಿಸುತ್ತಾನೆ, "ಗಾಂಧೀಜಿ ದೇಶದ ಸ್ವಾತಂತ್ರ್ಯದ ಬಗ್ಗೆ ನಿಮ್ಮ ಅನಿಸಿಕೆ ಏನು?

ಗಾಂಧೀಜಿ ಉತ್ತರ ನೀಡುತ್ತ "There is light outside India and darkness within" 'ಭಾರತದ ಹೊರಗೆಲ್ಲ ಬೆಳಕು, ಒಳಗಡೆ ಕತ್ತಲೆ' ಎಂದರು. ದುರ್ದೈವದಿಂದ ಕೆಲವೇ ದಿನಗಳಲ್ಲಿ ಗಾಂಧೀಜಿ ಗುಂಡೇಟಿನಿಂದ ಅಮರರಾದರು. ಆ ಕತ್ತಲೆ ಇಂದು ಕಾರ್ಗತ್ತಲೆಯಾಗಿದೆ.

ರಾಜಕೀಯ ಸ್ಥಾನಮಾನಕ್ಕಾಗಿ ಹಣ, ಹೆಂಡದ ಹೊಳೆ ಹರಿಸುತ್ತಿರುವ ಇಂದಿನ ಕಲುಷಿತ ರಾಜಕೀಯ ವ್ಯವಸ್ಥೆಯಲ್ಲಿ ಜಾತಿ, ಧರ್ಮಾಂಧತೆ ಆಧಾರಿತ ಕೋಮುವಾದ ಮತ್ತೆ ಹೆಡೆಯೆತ್ತಿ ನಿಂತಿರುವ ಪ್ರಸ್ತುತ ಕಾಲಘಟ್ಟ ಪ್ರಜೆಗಳನ್ನು ಮೂಕಪ್ರೇಕ್ಷಕರನ್ನಾಗಿಸಿದೆ. ದಯೆ, ಪ್ರೀತಿ, ಕರುಣೆ, ಸಮಾನತೆಯನ್ನು ಸಾರಿದ ಧರ್ಮಗಳ ಉಗಮವಿಂದು ಪ್ರಸ್ತುತ ಭ್ರಷ್ಟ ವ್ಯವಸ್ಥೆಯ ಬಗ್ಗೆ ದೀರ್ಘ ಮೌನ ತಾಳಿದೆ. ಇಂಥ ವಿಷಮಯ ಸಂಕ್ರಮಣ ಸಮಯದಲ್ಲಿ ಗಾಂಧೀಜಿ ಪ್ರಣೀತ ತತ್ತ್ವ ಪ್ರತಿಪಾದಕರಾದ ಸದ್ಗುರು ಮಹಾದೇವರು ಮತ್ತೆ ಮತ್ತೆ ನೆನಪಾಗುತ್ತಾರೆ.

"ಅನ್ಯಾಯವನ್ನು ಮಾಡಬೇಡ, ಅನ್ಯಾಯವನ್ನು ಸಹಿಸಬೇಡ" ಎನ್ನುವ ಅವರ ಕ್ರಾಂತಿ ಕರೆ ನಾಡಿನಲ್ಲಿ ಹೊಸ ಇತಿಹಾಸವನ್ನೇ ನಿರ್ಮಿಸಿತು.

ಭಾರತದ ಸ್ವಾತಂತ್ರ್ಯ ಹೋರಾಟ ಭಕ್ತಿಯ ತಳಹದಿಯ ಸಂತರ ಹೋರಾಟವಾಗಿತ್ತು. ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿ ತುಂಡುಬಟ್ಟೆಯ ಮಹಾನ್ ಸಂತ. ಕ್ರಾಂತಿಕಾರಿ ಮನೋಭಾವದ ನೇತಾಜಿ ಸುಭಾಸಚಂದ್ರ ಬೋಸರು ಸಹಿತ ಆಂತರ್ಯದಲ್ಲಿ ನಿಷ್ಕಾಮ ಸಂತರಾಗಿದ್ದರು. ದೇಶದ ಹಳ್ಳಿ ಪಟ್ಟಣಗಳಲ್ಲಿ ಸರ್ವಧರ್ಮೀಯರು ಒಂದುಗೂಡಿ ನಿಜ ಅಧ್ಯಾತ್ಮಯುಕ್ತ ರಾಜನೀತಿಯ ಆಧಾರದ ಮೇಲೆ ಸಮಾನತೆಯ ಸ್ವಾತಂತ್ರ್ಯವನ್ನು ಪಡೆಯಲು ಸಾಮೂಹಿಕ ಚಳವಳಿಗೆ ಅಣಿಯಾದರು. ತ್ಯಾಗ ಬಲಿದಾನಗಳ ಸ್ವಾತಂತ್ರ್ಯದ ಇತಿಹಾಸ ರೋಚಕವಾದುದು.

ಕರ್ನಾಟಕದಲ್ಲಿ ಇಂಚಗೇರಿ ಆಶ್ರಮ ಕ್ರಾಂತಿಯೋಗಿ ಮಹಾದೇವರ ನೇತೃತ್ವದಲ್ಲಿ ಸ್ವಾತಂತ್ರ್ಯ ಚಳವಳಿ ಸಂದರ್ಭದಲ್ಲಿ ಅಗ್ರಗಣ್ಯ ಪಾತ್ರ ವಹಿಸಿದ್ದಕ್ಕೆ ಇತಿಹಾಸ ಸಾಕ್ಷಿಯಾಗಿದೆ. ೧೯೩೬ರಲ್ಲಿ ನೇತಾಜಿ ಸುಭಾಸಚಂದ್ರ ಬೋಸರು ಹುಬ್ಬಳ್ಳಿಯಲ್ಲಿನ ಸದ್ಗುರು ಮಹಾದೇವರ ಗಿರೀಶ ಆಶ್ರಮಕ್ಕೆ ಭೇಟಿ ನೀಡಿ ತಾಯ್ನಾಡಿನ ವಿಮೋಚನೆಯ ಬಗ್ಗೆ ಸದ್ಗುರು ಮಹಾದೇವರ ಜೊತೆ ದೀರ್ಘ ಚರ್ಚಿಸಿದ್ದು ಅವಿಸ್ಮರಣೀಯ ಘಟನೆಯಾಗಿದೆ.

ಸ್ವಾತಂತ್ರ್ಯ ಚಳವಳಿಯ ಜೊತೆ ಗೋವಾ ವಿಮೋಚನೆ, ಹೈದರಾಬಾದ ವಿಮೋಚನೆಯಲ್ಲಿ ಮಹತ್ತರ ಪಾತ್ರ ವಹಿಸಿದ ಮಹಾದೇವರು ಎಂಥ ಗಂಡಾಂತರಕಾರಿ ಪರಿಸ್ಥಿತಿಯಲ್ಲೂ ಎದೆಗುಂದದ ಸಿಂಹದಂತಿದ್ದರು. ಕವಿ ರವೀಂದ್ರರ ನುಡಿಯಂತೆ "Where the mind is without fear and the head is held high" 'ಎಲ್ಲಿ ಮನಸ್ಸು ನಿರ್ಭಯವಾಗಿರುತ್ತದೊ, ಅಲ್ಲಿ ಸ್ವಾಭಿಮಾನದ ಶಿರ ಎತ್ತಿ ನಿಲ್ಲುವುದು' ಎಂಬಂತೆ ಭಯರಹಿತ ಅಖಂಡ ಧೈರ್ಯಶಾಲಿಗಳಾದ ಮಹಾದೇವರು ತಾನು ನಂಬಿದ ತತ್ತ್ವಕ್ಕಾಗಿ ನಿರಂತರ ಹೋರಾಟ ಮಾಡುವ ಮನೋಬಲವುಳ್ಳವರು.

ತಮ್ಮ ಜೊತೆ ತಮ್ಮ ಅನುಯಾಯಿಗಳಿಗೆ ತತ್ತ್ವಾಧಾರಿತ ಪ್ರೇರಣೆ ನೀಡಿ, ಅವರ ದೈನಂದಿನ ಕಷ್ಟನಷ್ಟಗಳಲ್ಲಿ ಭಾಗಿಯಾಗಿ ಶಿಷ್ಯರ ಸದ್ಗುರುವಾಗಿ ಗುರು-ಶಿಷ್ಯ ಸಂಬಂಧಕ್ಕೆ ನಿಜ ಸಮಾನತೆಯ ಹೊಸರೂಪ ನೀಡಿದವರು ಮಹಾದೇವರು.

ಅವರ ಹುಬ್ಬಳ್ಳಿಯ ಗಿರೀಶ ಆಶ್ರಮ ಮಹಾದೇವರ ಹೋರಾಟಗಳ ಕೇಂದ್ರಸ್ಥಳವಾಗಿತ್ತು. ನಾಡಶಿಲ್ಪಿ ಮಹಾದೇವರು ನಿಷ್ಕಾಮ ಕ್ರಿಯಾಶೀಲರೇ ಹೊರತು ಕೀಳು ಪ್ರಚಾರಪ್ರಿಯರಾಗಿರಲಿಲ್ಲ. ಅದಕ್ಕಾಗಿ ಅವರು ಸದಾ ಸ್ಮರಣೀಯರು.

ಶೋಷಣೆಯ ವ್ಯವಸ್ಥೆಯ ವಿರುದ್ಧ ಸದಾ ಸಾಮೂಹಿಕ ಪ್ರತಿಭಟನೆ ಮಾಡುತ್ತ ಬಂದ ಸದ್ಗುರು ಮಹಾದೇವರು ಬಡವರ, ನಿರ್ಗತಿಕರ, ದೀನ ದಲಿತರ ಪಕ್ಷಪಾತಿಗಳು. ಶ್ರೀಮಂತಿಕೆ ಆಧಾರಿತ ಪ್ರಜಾಸತ್ತೆ ಹೋಗಿ ಸಮಾನತೆ ಆಧಾರಿತ ಜಾತ್ಯತೀತ ಪ್ರಜಾಸತ್ತೆ ಅವರ ಆದರ್ಶ ಕನಸಾಗಿತ್ತು. ಆ ಕನಸನ್ನು ನನಸಾಗಿಸಲು ನಿರಂತರ ಹೋರಾಟ ಅವರ ನಿಶ್ಚಿತ ಗುರಿಯಾಗಿತ್ತು.

ಜಾತಿ ನಿರ್ಮೂಲನದ ಬಸವಾದಿ ಶರಣರ ಮಾನವೀಯ ಮೌಲ್ಯಗಳನ್ನು ನಿಜರೂಪದಲ್ಲಿ ಕಾರ್ಯಗತಗೊಳಿಸಿದ ಮಹಾನ್ ಕ್ರಾಂತಿಕಾರಿ ಗುರು ಮಹಾದೇವರಾಗಿದ್ದರು. ಸಹಸ್ರಾರು ಅಂತರ್ಜಾತೀಯ, ಅಂತರ್ಧರ್ಮೀಯ ವಿವಾಹಗಳನ್ನು ಅವರು ಏರ್ಪಡಿಸಿದ್ದರು. ಜಾತೀಯತೆಯಿಂದ ಕೂಡಿರುವ ಸಾಮಾಜಿಕ ವ್ಯವಸ್ಥೆಯಲ್ಲಿ ಈ ವಿವಾಹಗಳು ವಿಫಲವಾಗಬಾರದೆಂದು ಅಧ್ಯಾತ್ಮ ತಳಹದಿಯ ಸಾಮಾಜಿಕ, ಆರ್ಥಿಕ ಭದ್ರತೆಯನ್ನು ಒದಗಿಸಿ ಜಾತಿಮುಕ್ತ ಹೊಸ ಸಮಾಜ ನಿರ್ಮಾಣಕ್ಕೆ ನಾಂದಿ ಹಾಡಿದರು. ಭಾರತದ ಇತಿಹಾಸದಲ್ಲಿ ಸದ್ಗುರು ಮಹಾದೇವರ ಹೆಸರು ಶಾಶ್ವತವಾಗಿ ಉಳಿಯುವುದರಲ್ಲಿ ಯಾವ ಸಂದೇಹವೂ ಇಲ್ಲ.

ನಿಜ ಅಧ್ಯಾತ್ಮವೇ ಸಮಾನತೆಯಾಗಿದೆ. ಶರಣರು, ಸಂತರು ಮತ್ತು ದಾರ್ಶನಿಕರು ಶತಮಾನಗಳಿಂದ ಬೋಧಿಸುತ್ತ ಬಂದಿರುವ ಮಾನವೀಯ ಸಮಾಜವನ್ನು ನಿಜರೂಪದಲ್ಲಿ ಕ್ರಿಯಾತ್ಮಕವಾಗಿ ಅನುಷ್ಠಾನಗೊಳಿಸಿದ ಪ್ರಥಮ ಶ್ರೇಯಸ್ಸು ಸದ್ಗುರು ಮಾಧವಾನಂದರದಾಗಿದೆ. ಸರ್ವೋದಯದ ಆಧಾರದ ಮೇಲೆ 'ಸರ್ವರಿಗೂ ಸಮಬಾಳು, ಸರ್ವರಿಗೂ ಸಮಪಾಲು' ಎಂಬ ತತ್ತ್ವಾಧಾರಿತ ಸಬಲ, ಸುಭದ್ರ, ಅಖಂಡ, ಜಾತ್ಯತೀತ ಭಾರತ ವಿಶ್ವಶಾಂತಿಗೆ ಅಡಿಪಾಯವಾಗುವುದೆಂಬುದು ಮಹಾದೇವರ ಅಂತರ್ವಾಣಿಯಾಗಿತ್ತು.

ಎಚ್.ಡಬ್ಲ್ಯೂ. ಲಾಂಗಫೆಲೊ ತನ್ನ "Psalm of Life" ಎಂಬ ವಿಶ್ವಮಾನ್ಯ ಕವಿತೆಯ ಸಾಲುಗಳಲ್ಲಿ ಹೇಳುವಂತೆ 'ನಮ್ಮ ಬದುಕನ್ನು ಉದಾತ್ತಗೊಳಿಸಲು ಮಹಾತ್ಮರ ಬದುಕು ನಮಗೆ ಮತ್ತೆ ಮಾರ್ಗದರ್ಶನ ನೀಡುತ್ತವೆ. ಅವರು ಈ ಲೋಕ ಬಿಟ್ಟು ತೆರಳುವಾಗ ಕಾಲದ ಮರಳಿನ ಮೇಲೆ ತಮ್ಮ ಹೆಜ್ಜೆಯ ಗುರುತುಗಳನ್ನು ಬಿಟ್ಟು ಹೋಗುತ್ತಾರೆ.' ಹಾಗೆ ಧ್ಯಾನಯೋಗಿ ಮಹಾದೇವರು ತಮ್ಮ ಆದರ್ಶಮಯ ಹೆಜ್ಜೆಯ ಗುರುತುಗಳನ್ನು ಬಿಟ್ಟುಹೋಗಿದ್ದಾರೆ. ಅವರ ಹೆಜ್ಜೆಯ ಗುರುತುಗಳನ್ನು ಅನುಸರಿಸುವುದು ನಮ್ಮೆಲ್ಲರ ಪರಮ ಕರ್ತವ್ಯವಾಗಬೇಕು.

ತಿಳಿನೀಲದ ಅನಂತತೆಯಲ್ಲಿ ಲೀನವಾದ ಸದ್ಗುರು ಮಹಾದೇವರ ದಿವ್ಯ ಪ್ರಕಾಶ ನಮಗೆಲ್ಲಾ ದಾರಿದೀಪವಾಗಲಿ. ಇಂದಿನ ಕಾರ್ಗತ್ತಲಿನಲ್ಲಿ ಬೆಳ್ಳಿಯ ಗೆರೆ ಮೂಡಿ, ಕಾರ್ಮೋಡಗಳನ್ನು ಚೆದರಿಸಿ ದಿವ್ಯಭಾನುವಿನ ಪ್ರಕಾಶ ನೀಡಿ, ಪರಸ್ಪರ ಪ್ರೇಮಾಧಾರಿತ ಸಮಾನತೆಯ ಹೊಸ ಸಮಾಜ ರೂಪಿಸಲು ಸಹಾಯಕವಾಗಲಿ, ಸದ್ಗುರುಗಳ ದಿವ್ಯಜ್ಞಾನ ಚೈತನ್ಯ ನಮ್ಮ ಅಂತರಂಗದಲಿ ಅರಳಿ 'ಜೈಜಗತ್' ಸಂದೇಶದ ಅನುಷ್ಠಾನಕ್ಕೆ ಶ್ರಮಿಸಲು ಪ್ರೇರಣೆ ನೀಡಲಿ.

ಧಾರವಾಡ
೩೦.೧೨.೨೦೧೪

ಮಹಾದೇವ ಹೊರಟ್ಟಿ
ಕಾರ್ಯಾಧ್ಯಕ್ಷ
ಶ್ರೀ ಸದ್ಗುರು ಸಮರ್ಥ ಮಾಧವಾನಂದ ಪ್ರಭು
ಜನ್ಮಶತಮಾನೋತ್ಸವ ಸಮಿತಿ

ಕೃತಜ್ಞತೆ

ಸದ್ಗುರು ಸಮರ್ಥ ಶ್ರೀ ಮಾಧವಾನಂದ ಪ್ರಭುಜೀ ಜನ್ಮ ಶತಮಾನೋತ್ಸವ ಸ್ವಾಗತ ಸಮಿತಿಯ ಕಾರ್ಯಾಧ್ಯಕ್ಷರಾದ ಮಹಾದೇವ ಹೊರಟ್ಟಿ ಅವರು ಶ್ರೀ ಮಾಧವಾನಂದ ಪ್ರಭೂಜಿ (ಮುರಗೋಡ ಮಹಾದೇವಪ್ಪ ದೇವರು) ಪುಸ್ತಿಕೆಯೊಂದನ್ನು ಬರೆಯಬೇಕೆಂದು ಹೇಳಿದಾಗ ತುಂಬ ಸಂತೋಷದಿಂದ ಈ ಕಾರ್ಯವನ್ನು ಮಾಡಿರುವೆ.

ಮಿತ್ರ ಮಹಾಲಿಂಗ ಮಂಗಿ ಅವರು ಶ್ರೀಕ್ಷೇತ್ರ ಇಂಚಗೇರಿ ಮಠಕ್ಕೆ ಸಂಬಂಧಿಸಿದಂತೆ ಅನೇಕ ಗ್ರಂಥಗಳನ್ನು ರಚಿಸಿದ್ದಾರೆ. ಅವರ ಗ್ರಂಥಗಳಿಲ್ಲದಿದ್ದರೆ ಈ ಪುಸ್ತಿಕೆಯುನ್ನು ರಚಿಸುವುದು ಕಠಿಣಸಾಧ್ಯವಾಗಿತ್ತು. ಅವರು ಸಂಪಾದಿಸಿದ ಮತ್ತು ಮಹಾದೇವರ ಕುರಿತಂತೆ ಅವರು ಸಂದರ್ಶನ ಮಾಡಿದ ಸಾಹಿತ್ಯವನ್ನೊಳಗೊಂಡ 'ಮಾಧವ ಜೀವನ ದರ್ಶನ' ಗ್ರಂಥವು ಈ ಪುಸ್ತಿಕೆ ರಚನೆಗೆ ಬಹಳೇ ಸಹಾಯಕವಾಗಿದೆ. ಆ ಗ್ರಂಥದಲ್ಲಿ ನೂರರಷ್ಟು ಲೇಖನಗಳು, ಸಂದರ್ಶನಗಳು, ಪತ್ರಿಕಾ ವರದಿಗಳು ಮತ್ತು ಮಹಾದೇವರ ಮೇಲೆ ರಚಿಸಿದ ಹಾಡುಗಳಿವೆ. ಈ ಪುಸ್ತಿಕೆ ರಚನೆಗೆ ಇವೆಲ್ಲ ಸಹಾಯಕವಾಗಿವೆ ಮತ್ತು ಸ್ಫೂರ್ತಿ ನೀಡಿವೆ. ಆ ಎಲ್ಲ ಲೇಖಕರಿಗೆ ಋಣಿಯಾಗಿದ್ದೇನೆ.

ಮಹಾದೇವರ ಜೀವನ ಮತ್ತು ಸಾಧನೆಯಿಂದ ನಮ್ಮ ರಾಷ್ಟ್ರ ಮತ್ತು ರಾಜ್ಯ ನಾಯಕರು ಲಾಭ ಪಡೆದರೆ ದೇಶದಲ್ಲಿ ಸರ್ವೋದಯವಾಗುವುದು. ಅವರ ಚಿಂತನೆಗಳನ್ನು ಕಾರ್ಯರೂಪಕ್ಕೆ ತಂದರೆ ನಮ್ಮ ದೇಶ ಇಡೀ ಜಗತ್ತಿಗೆ ಮಾದರಿಯಾಗುವುದು ಎಂಬ ಆಶಯದೂಂದಿಗೆ ಈ ಪುಸ್ತಿಕೆಯನ್ನು ರಚಿಸಿದ್ದೇನೆ. ಈ ಪುಸ್ತಿಕೆಯುನ್ನು ಸಿದ್ಧಪಡಿಸುವಾಗ ನಾನು ಮಹಾ ಚೈತನ್ಯದ ಜೊತೆ ಆನಂದಮಯವಾಗಿದ್ದೇನೆ ಎಂಬ ಭಾವ ಮೂಡಿತು. ಈ ಅಸಹಿಷ್ಣುತೆಯ ದಿನಗಳಲ್ಲಿ ಆಶಾಕಿರಣವೊಂದು ನನ್ನ ಮನದಲ್ಲಿ ಮೂಡಿತು.

ಈ ಪುಸ್ತಿಕೆಯ ಪ್ರತಿ ಸಾಲಿನ ಬಗ್ಗೆ ಚರ್ಚಿಸಿ ಸಲಹೆ ಸೂಚನೆ ನೀಡಿದ ಗಿರೀಶ ಆಶ್ರಮದ ಬಂಧು ಗೋಪಾಲ ಮುರಗೋಡ ಮತ್ತು ಮಹಾಲಿಂಗ ಮಂಗಿ ಅವರ ಪುಸ್ತಕಗಳನ್ನು ಒದಗಿಸಿದ ಚನ್ನಬಸಪ್ಪ ಕರಡೆಣ್ಣವರ, ಸತ್ತೂರ ಹಾಗೂ ಮೇಲೆ ತಿಳಿಸಿದ ಎಲ್ಲರಿಗೂ ಕೃತಜ್ಞನಾಗಿದ್ದೇನೆ. ಈ ಪುಸ್ತಿಕೆಯನ್ನು ಅತಿ ಕಡಿಮೆ ಸಮಯುದಲ್ಲಿ ಸುಂದರವಾಗಿ ಮುದ್ರಿಸಿ ಕೊಟ್ಟ ಮನೋಹರ ಪ್ರಿಂಟಿಂಗ್ ಪ್ರೆಸ್ಸಿನ ಆತ್ಮೀಯ ಬಂಧು ರವಿ ಆಕಳವಾಡಿ ಅವರಿಗೆ ನಮನಗಳು.

ಧಾರವಾಡ ರಂಜಾನ್ ದರ್ಗಾ
೩೧.೧೨.೨೦೧೫

ಪ್ರವೇಶ

ಕ್ರಾಂತಿಯೋಗಿ ಮಹಾದೇವರನ್ನು ದೇವರು, ಮುರಗೋಡ ಮಹಾದೇವರು, ಮುರಗೋಡ ಮಹಾದೇವಪ್ಪ, ಸ್ವಾಮಿ ಮಾಧವಾನಂದ ಮತ್ತು ಸದ್ಗುರು ಸಮರ್ಥ ಮಾಧವಾನಂದ ಪ್ರಭುಗಳು ಎಂದು ಭಕ್ತರು ಪ್ರೀತಿಯಿಂದ ಕರೆಯುತ್ತಾರೆ. ಅವರು ತಮ್ಮ ೬೫ ವರ್ಷಗಳ ಸಾರ್ಥಕ ಜೀವನ ನಡೆಸುವುದರ ಮೂಲಕ, ಒಬ್ಬ ವ್ಯಕ್ತಿ ನೂರು ವರ್ಷಗಳಾದರೂ ಸಾಧಿಸಲಿಕ್ಕಾಗದ್ದನ್ನು ಸಾಧಿಸಿದ್ದು ಪವಾಡ ಸದೃಶವಾಗಿ ಕಾಣುತ್ತದೆ.

ಭಾರತದ ಚರಿತ್ರೆಯಲ್ಲಿ ಭಕ್ತಿಪಂಥಕ್ಕೆ ಕ್ರಾಂತಿಕಾರಿ ಪರಂಪರೆ ಇದೆ. ಭಕ್ತಿಪಂಥದವರು ವೈದಿಕರಿರಲಿ, ಅವೈದಿಕರಿರಲಿ ಸಂಪ್ರದಾಯದವರಿರಲಿ ಜಾತಿ ಮತ್ತು ಅಸ್ಪೃಶ್ಯತೆಯನ್ನು ಮೀರಿ ಬೆಳೆಯುವ ಅದ್ವೈತವನ್ನು ಮೈಗೂಡಿಸಿಕೊಂಡಿರುತ್ತಾರೆ. ಸಕಲಜೀವಾತ್ಮರಲ್ಲಿ ತಮ್ಮನ್ನು ಕಾಣುವ ಮತ್ತು ತಮ್ಮಲ್ಲಿ ಸಕಲಜೀವಾತ್ಮರನ್ನು ಕಾಣುವ ಮೂಲಕ ಪ್ರತಿಯೊಬ್ಬರಲ್ಲಿನ ದೈವೀಸ್ವರೂಪದ ಪ್ರತಿಪಾದಕರಾಗುತ್ತಾರೆ. ವರ್ಣ, ಜಾತಿ, ಅಸ್ಪೃಶ್ಯತೆ ಮತ್ತು ಶೋಷಣೆಯಿಂದಾಗಿ ಸಹಸ್ರಾರು ವರ್ಷಗಳಿಂದ ನರಳುತ್ತ ಸಾಗಿರುವ ಭಾರತದ ಶ್ರೇಣೀಕೃತ ಸಾಮಾಜಿಕ ವ್ಯವಸ್ಥೆಗೆ ಭಕ್ತಿಪಂಥ ಬಹುದೊಡ್ಡ ಸವಾಲಾಗಿದೆ. ದಕ್ಷಿಣ ಮತ್ತು ಉತ್ತರ ಭಾರತ ಸೇರಿದಂತೆ ಈ ಪಂಥಕ್ಕೆ ಸಾವಿರ ವರ್ಷಗಳ ಇತಿಹಾಸವಿದೆ. ಎಲ್ಲ ಭಕ್ತಿಪಂಥಗಳಲ್ಲಿ ವಚನ ಚಳವಳಿ ವಿಶಿಷ್ಟವಾಗಿದೆ. ಸಂಕುಲ ಪ್ರಜ್ಞೆ, ಮತ್ತು ಸಾಮೂಹಿಕ ಬದುಕನ್ನು ನಾವು ೧೨ನೇ ಶತಮಾನದ ವಚನಗಳಲ್ಲಿ ಕಾಣುತ್ತೇವೆ. ಇದು ಜಗತ್ತಿನಲ್ಲಾದ ಮೊದಲ ಪ್ರಯೋಗವಾಗಿದೆ. ಇಂಥ ಪ್ರಯೋಗ ೨೦ನೇ ಶತಮಾನದಲ್ಲಿ ವಿಜಯಪುರ ಜಿಲ್ಲೆಯ ಇಂಡಿ ತಾಲ್ಲೂಕಿನ ಶ್ರೀಕ್ಷೇತ್ರ ಇಂಚಗೇರಿಯಲ್ಲಿ ಆಯಿತು.

ಬಸವಣ್ಣನವರ 'ಇವ ನಮ್ಮವ, ಇವ ನಮ್ಮವ' ಎನ್ನುವ ಪ್ರಜ್ಞೆ, ಮಾರ್ಕ್ಸ್‌ನ ಸಮತಾವಾದ, ಗಾಂಧೀಜಿಯವರ ಗ್ರಾಮಸ್ವರಾಜ್ಯದ ಪರಿಕಲ್ಪನೆ ಮತ್ತು ವಿನೋಬಾರ ಸರ್ವೋದಯ ಇಲ್ಲಿ ಮೇಳೈಸಿ 'ಇಂಚಗೇರಿ ಸಂಪ್ರದಾಯ' ಎಂಬ ಮಾದರಿ

ಜೀವನವಿಧಾನವೊಂದು ಆರಂಭವಾಗುವಲ್ಲಿ ಸದ್ಗುರು ಮಾಧವಾನಂದ ಪ್ರಭೂಜಿಯವರ ಪ್ರಯತ್ನ ಅಗಾಧವಾಗಿದೆ.

ಧ್ಯಾನಯೋಗ ಅವರಿಗೆ ಬಹು ಪ್ರಿಯವಾದುದಾಗಿತ್ತು. ಈ ಧ್ಯಾನಯೋಗದಲ್ಲಿ ಅವರು ಇಡೀ ಜಗತ್ತನ್ನು ತಮ್ಮ ಆತ್ಮದೊಳಗೆ ತುಂಬಿಕೊಂಡ ಅಧ್ಯಾತ್ಮವಾದಿಗಳಾದರು. ಅಂತರ್ಯಾಮಿಯ ಜೊತೆಗಿನ ಸುಖವನ್ನು ಲಿಂಗಾಂಗಸಾಮರಸ್ಯದಂತೆ ಅನುಭವಿಸುತ್ತಲೇ ಹೊರಗಿನ ಜಗತ್ತಿನ ಪ್ರಜ್ಞೆಯೊಂದಿಗೆ ಬದುಕಿ ಲೋಕಕ್ಕೆ ಮಾರ್ಗದರ್ಶಕರಾದರು. ಜಗತ್ತಿನ ಪ್ರಜ್ಞೆ ಎಂದರೆ ಜಗತ್ತಿನಲ್ಲಿ ಮಾನವ ನಿರ್ಮಿತವಾದ ಶೋಷಣೆ, ಅಪಮಾನ ಮತ್ತು ಎಲ್ಲ ತೆರನಾದ ಅಸಮಾನತೆಗಳನ್ನು ಹೋಗಲಾಡಿಸಿ ಮನುಷ್ಯ ಜಾತಿ ಒಂದೇ ಸತ್ಯ ಎಂಬ ಪ್ರಜ್ಞೆಯನ್ನು ಹೊಂದುವುದು. ತುರೀಯ ಅವಸ್ಥೆಯಲ್ಲಿ ಯೋಗಿಗಳು ಅಮೃತಪಾನ ಮಾಡುವರು ಎಂದು ಹೇಳುತ್ತಾರೆ. ಧ್ಯಾನಯೋಗವನ್ನು ಆನಂದಿಸುತ್ತಿದ್ದ ಮಾಧವಾನಂದರು ಸಮಾಜಮುಖಿಯಾಗಿ ಕ್ರಾಂತಿಯೋಗಿಯಾಗಿದ್ದರಿಂದ ಅವರ ಚಿಂತನಾಕ್ರಮ ಮತ್ತು ಅರಿವಿನ ವಿಸ್ತಾರ ಅನನ್ಯವಾಗಿತ್ತು. ಆದ್ದರಿಂದಲೇ 'ಯಾರು ಜನತಾ ಜನಾರ್ದನನ ಸೇವೆ ಎಂಬ ಮಡುವಿನಲ್ಲಿ ಧುಮುಕುವರೋ ಅವರು ಅಮೃತ ಪಾನಮಾಡಿ ಅಮರರಾಗುವರು' ಎಂದು ತಿಳಿಸಿದ್ದಾರೆ. ಅಂತೆಯೆ 'ಜೈ ಜಗತ್' ಎಂದು ಘೋಷಿಸಿದ್ದಾರೆ. ಜೈ ಜಗತ್ ಎಂದರೆ ಶರಣರು ಹೇಳಿದಂತೆ ಸಕಲ ಜೀವಾತ್ಮರಿಗೆ ಲೇಸನೆ ಬಯಸುವುದು. ದೇವರು ನುಡಿದಂತೆ ನಡೆದು ಬದುಕಿನ ಕೊನೆಯ ಕ್ಷಣದ ವರೆಗೂ ಸಕಲಜೀವಾತ್ಮರ ಒಳಿತಿಗಾಗಿ ಕಾರ್ಯೋನ್ಮುಖರಾಗಿದ್ದರು.

ಇಂಚಗೇರಿ ಅವರ ಕಾರ್ಯಕ್ಷೇತ್ರವಾಗಿದ್ದರೂ ಅವರು ಭಕ್ತರಿದ್ದಲ್ಲಿಗೆ ಹೋಗುವ ಸಂಚಾರಿ ಭಾವದವರಾಗಿದ್ದರು. ಭಕ್ತರ ಮತ್ತು ಸಾಮಾಜಿಕ ಸಮಸ್ಯೆಗಳಿಗೆ ಉತ್ತರ ಕಂಡುಕೊಂಡು ಪರಿಹಾರಕ್ಕಾಗಿ ಕ್ರಿಯಾಶೀಲರಾಗುವುದು ಅವರ ಜಾಯಮಾನವಾಗಿತ್ತು. ಅರಿವನ್ನು ಆಚರಣೆಗೆ ತರುವಲ್ಲಿ ಅವರು ನಿಷ್ಣಾತರಾಗಿದ್ದರು. ಬ್ರಿಟಿಷ್ ಸರ್ಕಾರದ ಶೋಷಣೆಯಿಂದ ಭಾರತೀಯರನ್ನು ವಿಮೋಚನೆಗೊಳಿಸುವುದು ಅವರ ಮುಖ್ಯ ಗುರಿಯಾಗಿತ್ತು. ಸಮೂಹ ಜ್ಞಾನವಿಲ್ಲದೆ ಈ ಶಕ್ತಿಯನ್ನು ಪಡೆಯಲು ಸಾಧ್ಯವಿಲ್ಲ. ಆಧ್ಯಾತ್ಮಿಕ ಸ್ಥೈರ್ಯವಿಲ್ಲದೆ ಈ ಶಕ್ತಿಯನ್ನು ಉಳಿಸಿಕೊಳ್ಳಲು ಸಾಧ್ಯವಿಲ್ಲ ಎಂಬುದರ ಪರಿಜ್ಞಾನ ಅವರಿಗಿತ್ತು. ಅನುಭಾವಿಗಳ ಕ್ರಾಂತಿಯಿಂದ ಮಾತ್ರ ದೇಶಕ್ಕೆ ಸ್ವಾತಂತ್ರ್ಯ ಸಿಗಲು ಸಾಧ್ಯ ಎಂಬ ನಿಲುವು ಅವರದಾಗಿತ್ತು. ಭಕ್ತಿಪರಂಪರೆ, ಗಾಂಧೀಜಿಯವರ ನೈತಿಕ ಶಕ್ತಿ ಮತ್ತು ವಿನೋಬಾರ ಸರ್ವೋದಯ ಪರಿಕಲ್ಪನೆ ಅವರನ್ನು ಹೊಸ ಚಿಂತನೆಗೆ ಹಚ್ಚಿದವು. ಬಹುಶಃ ಭಾರತದಲ್ಲಿ ಆಧ್ಯಾತ್ಮಿಕ ನೆಲೆಯಿಂದ ಮೂಡಿ ಬಂದ ಸ್ವಾತಂತ್ರ್ಯ ಹೋರಾಟಗಾರರೆಂದರೆ ಇಂಚಗೇರಿ ಸಂಪ್ರದಾಯದವರೇ ಇರಬೇಕು.

ಜಮೀನುದಾರಿ ವ್ಯವಸ್ಥೆಯ ಶೋಷಣೆ ಮತ್ತು ಬ್ರಿಟಿಷ್ ಸರ್ಕಾರದ ದಬ್ಬಾಳಿಕೆ ವಿರುದ್ಧ ಅವರು ಏಕಕಾಲಕ್ಕೆ ಹೋರಾಟ ಆರಂಭಿಸಿದರು. ಸಾತ್ವಿಕ ಕಳೆಯಿಂದ ಕೂಡಿದ ಭವ್ಯ ಮತ್ತು ಆಕರ್ಷಕವಾದ ದೇಹದಾರ್ಢ್ಯ, ಪ್ರಶಾಂತ ವದನ, ಕಾಂತಿ ತುಂಬಿದ ಕಣ್ಣುಗಳು, ಹಿತ ಮಿತ ಮೃದುವಚನಗಳಿಂದ ಕೂಡಿದ ವ್ಯಕ್ತಿತ್ವ, ನೋಡುಗರಿಗೆ ಅಧ್ಯಾತ್ಮದ ಮೇರುಪರ್ವತವೇ ಎದುರಿಗೆ ನಿಂತ ಅನುಭವ. ಈ ಎಲ್ಲ ಕಾರಣಗಳಿಂದಾಗಿ ಜನಸಮುದಾಯದ ಮನದಲ್ಲಿ ಮಹಾದೇವರ ಬಗ್ಗೆ ಸಹಜವಾಗಿಯೆ ಪೂಜ್ಯ ಭಾವನೆ ಹುಟ್ಟುತ್ತಿತ್ತು.

ಬಾಲಬ್ರಹ್ಮಚಾರಿಯಾಗಿದ್ದ ಅವರ ಬಳಿ ಲೌಕಿಕದ ಯಾವ ಆಸೆಗಳೂ ಸುಳಿಯಲಿಲ್ಲ. ಆದರೆ ಮಾನವರ ಆಧ್ಯಾತಿಕ ಅಭ್ಯುದಯದ ಜೊತೆ ಐಹಿಕ ಅಭ್ಯುದಯ ಕೂಡ ಆಗಬೇಕು ಎಂಬ ಅವರ ದೃಢನಿರ್ಧಾರವೇ ಅವರನ್ನು ಕ್ರಾಂತಿಯೋಗಿಯಾಗಿಸಿತು. ಯೋಗ ಮತ್ತು ಕಾಯಕಯೋಗದ ಜೊತೆ ಸ್ವಾತಂತ್ರ್ಯ ಸಂಗ್ರಾಮ, ಕೊಲೆ ಸುಲಿಗೆ ಮಾಡುತ್ತ ಹೈದರಾಬಾದ ಸಂಸ್ಥಾನವನ್ನು ಹದಗೆಡಿಸಿದ ರಜಾಕಾರರ ಹಾವಳಿಯ ವಿರುದ್ಧದ ಹೋರಾಟ, ಜತ್ತ, ಸಾಂಗಲಿ, ರಾಮದುರ್ಗ ಮತ್ತು ಜಮಖಂಡಿ ಮುಂತಾದ ಸಂಸ್ಥಾನಗಳ ವಿಲೀನೀಕರಣಕ್ಕಾಗಿ ಚಳವಳಿ, ಕರ್ನಾಟಕ ಏಕೀಕರಣ ಮತ್ತು ಗೋವಾ ವಿಮೋಚನೆಗಾಗಿ ಜನಶಕ್ತಿಯೊಡನೆ ಮುನ್ನುಗ್ಗುವಿಕೆ ಹಾಗೂ ಅಖಿಲ ಕರ್ನಾಟಕ ರಾಜ್ಯ ನಿರ್ಮಾಣದ ಛಲದೊಂದಿಗೆ ಜನಸಮುದಾಯದ ಸಂಘಟನೆ ಮುಂತಾದವು ಅವರು ಮಾಡಿದ ಹೋರಾಟಗಳ ವಿವಿಧ ರೂಪಗಳು.

ಇವೆಲ್ಲವುಗಳಿಗೆ ಪೂರಕವಾಗಿ ಭೂದಾನ, ಗೋದಾನ, ದಾರುಬಂದಿ (ಸಾರಾಯಿ ನಿಷೇಧ), ಸರ್ವೋದಯ ಆಂದೋಲನ, ರೈತ ಚಳವಳಿ, ಪ್ರಜಾಪರಿಷತ್, ಲೋಕಸೇವಕ ಸಂಘ ಮತ್ತು ಕಾರ್ಮಿಕ ಹೋರಾಟಗಳಲ್ಲಿ ಜನಸಾಮಾನ್ಯರು ಮತ್ತು ಆಶ್ರಮವಾಸಿಗಳು ಭಾಗವಹಿಸುವಂತೆ ಪ್ರೇರೇಪಿಸಿದರು. ಸಾಮೂಹಿಕ ಕೃಷಿ, ಅಂತರ್ಜಾತಿ ವಿವಾಹ, ವಿಧವಾ ವಿವಾಹ, ಸಾಮೂಹಿಕ ಕೃಷಿ ಮುಂತಾದ ಕ್ರಾಂತಿಕಾರಿ ಪ್ರಯೋಗಗಳನ್ನು ಮಾಡಿದರು. ನಿರಾಶ್ರಿತರಿಗೆ ಆಶ್ರಯ ನೀಡಿದರು. ದುಃಖಿಗಳಿಗೆ ಬದುಕಿನಲ್ಲಿ ಭರವಸೆ ಮೂಡಿಸಿದರು. ಆತ್ಮಗೌರವದ ಬಗ್ಗೆ ತಿಳಿಹೇಳುತ್ತ ದುರ್ಬಲರು ಸಬಲರಾಗುವಂತೆ ಮಾಡಿದರು. ದೇವರು ಎಲ್ಲ ವಿಧದಲ್ಲಿ ಶೋಷಿತರ ಧ್ವನಿಯಾದರು.

ಇವರ ಆಧ್ಯಾತ್ಮಿಕ ಚಿಂತನೆಗಳು ಸದಾ ತುಳಿತಕ್ಕೊಳಗಾದವರ ಪರ ಇದ್ದವು. ಜಮೀನುದಾರಿ ವ್ಯವಸ್ಥೆಯಲ್ಲಿ ಶೋಷಿತರ ಪರ ನಿಲ್ಲುವವರು ಎಂಟೆದೆಯವರಾಗಿರಬೇಕಿತ್ತು. ಅಂಥ ಆತ್ಮಶಕ್ತಿಯನ್ನು ಹೊಂದಿದ್ದರಿಂದಲೆ ಜನಸಮುದಾಯ ಅವರನ್ನು 'ದೇವರು' ಎಂದು ಹೃತ್ಪೂರ್ವಕವಾಗಿ ಕರೆಯಿತು.

ತುಳಿತಕ್ಕೊಳಗಾದವರ ಪರ ಚಿಂತನೆ ಮಾಡುವವರು ತುಳಿತಕ್ಕೊಳಗಾದವರಿಗೆ ಸಂಬಂಧಿಸಿದ ರಾಜಕೀಯ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ ಮತ್ತು ಆಧ್ಯಾತ್ಮಿಕ ಚಿಂತನೆ ಮಾಡುವುದು ಅವಶ್ಯವಾಗಿತ್ತು. ಈ ಕಾರಣದಿಂದಲೇ ಅವರು ಮಾನವಧರ್ಮದ ಪ್ರತಿಪಾದಕರಾಗಿ 'ಜೈ ಜಗತ್' ಎಂದು ಘೋಷಿಸಿದರು. ಸರ್ವರಿಗೆ ಸಮಬಾಳು ಮತ್ತು ಸಮಪಾಲು ಸಿಗುವಂಥ ಸಾಮೂಹಿಕ ಬದುಕಿನ ಸರ್ವೋದಯದಿಂದ ಮಾತ್ರ ನವಸಮಾಜ ಉದಯವಾಗಲು ಸಾಧ್ಯ ಎಂಬ ದೃಢನಂಬಿಕೆಯೊಂದಿಗೆ ಇಂಚಗೇರಿಯ ಶ್ರೀಕ್ಷೇತ್ರದಲ್ಲಿ ಸಾಮೂಹಿಕ ಕೃಷಿಯನ್ನು ಬೃಹತ್ ಪ್ರಮಾಣದಲ್ಲಿ ಆರಂಭಿಸಿದರು. ಅಂತರ್ಜಾತೀಯ ವಿವಾಹಗಳನ್ನು ನೆರವೇರಿಸುತ್ತ ಜಾತಿಗಳನ್ನು ಸಂಕರಗೊಳಿಸಿ ನಿರ್ನಾಮ ಮಾಡುವುದರ ಮೂಲಕ ತಮ್ಮದೇ ಆದ ಹೊಸ ಸಮತಾ ಸಮಾಜವನ್ನು ಸೃಷ್ಟಿಸಿದರು. ಕಾಯಕದ ಮೂಲಕ ಆತ್ಮಜ್ಞಾನಕ್ಕೆ ಹೋಗುವ ದಾರಿಯನ್ನು ಅನುಯಾಯಿಗಳಿಗೆ ತೋರಿಸಿಕೊಟ್ಟರು.

ಅವರು ಹೋರಾಟಗಳನ್ನು ನಿಯಂತ್ರಿಸುತ್ತ ಕುಳಿತವರಲ್ಲ. ಜಮೀನುದಾರಿ, ವೈದಿಕಶಾಹಿ, ನಿಜಾಮಶಾಹಿ, ಪೋರ್ತುಗೀಜ್ ಹಾಗೂ ಬ್ರಿಟಿಷ್ ಸಾಮ್ರಾಜ್ಯಶಾಹಿ ವಿರುದ್ಧದ ರೋಮಾಂಚನಕಾರಿ ಐತಿಹಾಸಿಕ ಹೋರಾಟಗಳಲ್ಲಿ ನೇರವಾಗಿ ಭಾಗಿಯಾದವರು. ಅವರು ಪೀಠಸ್ಥ ಮನಸ್ಥಿತಿಯವರಾಗಿದ್ದಿಲ್ಲ; ಜಂಗಮತ್ವ ಅವರ ಸ್ವಭಾವವಾಗಿತ್ತು. ಅವರು ಜ್ಞಾನಚಕ್ರದ ಮೇಲೆ ಸುತ್ತುತ್ತಲೇ ಇದ್ದರು. ನಿಜವಾದ ಸೇನಾಧಿಪತಿಯಂತೆ ಎಲ್ಲ ಹೋರಾಟಗಳ ಮುಂಚೂಣಿಯಲ್ಲಿರುತ್ತಿದ್ದರು. ನ್ಯಾಯಕ್ಕಾಗಿ ಹೋರಾಡುವ ಎಲ್ಲ ಸಂದರ್ಭಗಳಲ್ಲಿ ಜನಸಾಮಾನ್ಯ ಮಹಿಳೆಯರು ಮತ್ತು ಪುರುಷರು ಅಸಾಮಾನ್ಯ ಧೈರ್ಯ ತೋರುವಂಥ ಮನೋಭೂಮಿಕೆಯನ್ನು ಸಿದ್ಧಪಡಿಸುವುದು ಅವರಿಗೆ ಕರಗತವಾಗಿತ್ತು. ಅವರು ಪಲ್ಲಕ್ಕಿ ಏರಲಿಲ್ಲ, ಕಾವಿ ಧರಿಸಲಿಲ್ಲ. ನಿಜದ ನಿಲವಿನ ಶುಭ್ರತೆಯೊಂದಿಗೆ ಭಕ್ತರ ಹೃದಯಸಿಂಹಾಸನವನ್ನು ಅಲಂಕರಿಸಿದರು.

ಅಜ್ಞಾನ, ಅಹಂಕಾರ, ಶೋಷಣೆ, ದಬ್ಬಾಳಿಕೆ ಹಾಗೂ ಧಾರ್ಮಿಕ ಮತ್ತು ಆರ್ಥಿಕ ಅಸಮಾನತೆಯ ವಿರುದ್ಧ ದೇವರು 'ಯುದ್ಧ' ಸಾರಿದ್ದರು. ಸಮೂಹಶಕ್ತಿಯಿಂದ ಮಾತ್ರ ಇಂಥ ಪ್ರತಿಕೂಲ ವ್ಯವಸ್ಥೆಯ ವಿರುದ್ಧ ಹೋರಾಡಲು ಸಾಧ್ಯ ಎಂಬುದನ್ನು ಅವರು ಅರಿತಿದ್ದರು. ಇದಕ್ಕಾಗಿ ಕಲಿತವರನ್ನು ಹುಡುಕಿಕೊಂಡು ಹೋಗುತ್ತ ಸಮಯ ವ್ಯರ್ಥಗೊಳಿಸಲಿಲ್ಲ. ಅನ್ಯಾಯಕ್ಕೊಳಗಾಗುತ್ತಲೇ ಇರುವ ಅಸಹಾಯಕರಿಗೆ ಲೋಕಜ್ಞಾನ ಮತ್ತು ಆತ್ಮಜ್ಞಾನದ ಅರಿವು ಮೂಡಿಸಿ ಅವರನ್ನು ಒಳಗೂ ಹೊರಗೂ ಸದೃಢಗೊಳಿಸಿದರು. ಇದೇ ಅವರ ಯಶಸ್ಸಿನ ಗುಟ್ಟು. ಅನುಪಮ ಇಂಚಗೇರಿ ಸಂಪ್ರದಾಯದ ಸಾಮೂಹಿಕ ಬದುಕಿನ ಅಡಿಪಾಯವೇ ಇದು.

ಬಾಲ್ಯ ಮತ್ತು ಯೌವನ

ಹುಬ್ಬಳ್ಳಿಯ ವೀರಾಪೂರ ಓಣಿಯಲ್ಲಿ ಮಹಾದೇವರು ೧೯೧೪ನೇ ನವೆಂಬರ್ ೨ರಂದು ಮುರಗೋಡ ಶಿವಪ್ಪನವರು ಮತ್ತು ಕಾಳಮ್ಮನವರ ದ್ವಿತೀಯ ಪುತ್ರರಾಗಿ ಜನಿಸಿದರು. ಅವರ ತಂದೆಯವರು ರ್‍ಯಾಲಿ ಕಂಪನಿಯ ಮ್ಯಾನೇಜರ್ ಆಗಿದ್ದರು. ಅದೇ ವೇಳೆಯಲ್ಲಿ ಅವರಿಗೆ ಇಂಚಗೇರಿ ಸಂಪ್ರದಾಯದ ಸಂಪರ್ಕ ಬಂದಿತ್ತು. ಅವರು ಇಂಚಗೇರಿ ಸಂಪ್ರದಾಯಕ್ಕೆ ತಮ್ಮ ತನುಮನಧನಗಳನ್ನು ಅರ್ಪಿಸಿದರು. ಜಮಖಂಡಿ ಮೂಲದ ಸದ್ಗುರು ಗಿರಿಮಲ್ಲೇಶ್ವರ ಮಹಾರಾಜರ ದೇಹತ್ಯಾಗದ ನಂತರ ಅಷ್ಟೊತ್ತಿಗಾಗಲೆ ನಿವೃತ್ತರಾಗಿದ್ದ ಶಿವಪ್ಪನವರು ಇಂಚಗೇರಿ ಸಂಪ್ರದಾಯದ ಸಂಪೂರ್ಣ ಜವಾಬ್ದಾರಿ ವಹಿಸಿಕೊಂಡು ಸದ್ಗುರು ಶಿವಪ್ರಭು ಮಹಾರಾಜರಾದರು.

ಮಹಾದೇವರ ಮನಸ್ಸು ಬಾಲ್ಯದಲ್ಲೇ ಅಧ್ಯಾತ್ಮದ ಕಡೆಗೆ ಹರಿಯತೊಡಗಿತ್ತು. ಹೀಗಾಗಿ ಅವರು ಪ್ರಾಥಮಿಕ ಶಾಲಾ ಶಿಕ್ಷಣವನ್ನು ಕೂಡ ಪೂರ್ಣವಾಗಿ ಮುಗಿಸಲಿಲ್ಲ. ಇಂಚಗೇರಿ ಸಂಪ್ರದಾಯದ ಸದ್ಗುರು ಗಿರಿಮಲ್ಲೇಶ್ವರ ಮಹಾರಾಜರ ಸಂಪರ್ಕ ಲಭಿಸಿದ ಮೇಲೆ ಅವರ ಬದುಕಿಗೆ ಹೊಸ ತಿರುವು ಮೂಡಿತು. ಶ್ರೀ ಗಿರಿಮಲ್ಲೇಶ್ವರ ಮಹಾರಾಜರು ಇಂಚಗೇರಿಯಲ್ಲಿನ ಸಪ್ತಾಹ ಸಂದರ್ಭದಲ್ಲಿ ನಡೆದ ಪ್ರವಚನದ ವೇಳೆ 'ನಿಮ್ಮ ಊರಿಂದ ಒಂದೂ ಶ್ವಾಸ ಬಿಡದೆ ಯಾರು ಧ್ಯಾನ ಮಾಡುತ್ತ ಬಂದಿದ್ದೀರೋ ಅವರು ಎದ್ದು ನಿಲ್ಲಿರಿ' ಎಂದು ಹೇಳಿದರು. ಆಗ ಕಂಬದ ಮರೆಯಲ್ಲಿ ಕುಳಿತಿದ್ದ ಮಹಾದೇವರು ಎದ್ದು ನಿಂತರು. ಶ್ರೀ ಗಿರಿಮಲ್ಲೇಶ್ವರರು ಅವರನ್ನು ನೋಡಿದ ಕೂಡಲೆ 'ಇವನೇ ದೇವರು' ಎಂದು ಹೇಳಿದರು. ಮುಂದೆ ಅದೇ ಹೆಸರಿನಿಂದ ಭಕ್ತರು ಅವರನ್ನು ಕರೆಯತೊಡಗಿದರು.

ಭಜನೆ ಮತ್ತು ಧ್ಯಾನದ ಮಧ್ಯೆ ೯ ವರ್ಷದ ಬಾಲಕ ಮಹಾದೇವರನ್ನು ನೋಡಿ ಆತ್ಮಜ್ಞಾನದ ತೇಜಸ್ವಿ ಬೀಜಸ್ವರೂಪವನ್ನೇ ನೋಡಿದಂತೆ ಮಹಾರಾಜರು ಹರ್ಷಚಿತ್ತರಾದರು. ಗುರು ಶಿಷ್ಯ ಸಂಬಂಧದ ಬೀಜ ಮೊಳಕೆಯೊಡೆಯಲಾರಂಭಿಸಿತು. ಗಿರಿಮಲ್ಲೇಶ್ವರರು ಬಾಲಕ ಮಹಾದೇವರಿಗೆ ಪಾರಮಾರ್ಥದ ಧಾರೆ ಎರೆಯ ತೊಡಗಿದರು. ಮಹಾದೇವರು ತಮ್ಮ ಉತ್ತರಾಧಿಕಾರಿ ಎಂಬ ಭಾವದೊಂದಿಗೆ ಅವರನ್ನು ಬೆಳೆಸಿದರು. ದೇವರು ೧೮ ವರ್ಷದವರಿದ್ದಾಗ ಭಾರತ ಸ್ವಾತಂತ್ರ್ಯಕ್ಕಾಗಿ ಇಂಚಗೇರಿಯಲ್ಲಿ ವೈಯಕ್ತಿಕ ಸತ್ಯಾಗ್ರಹ ಮಾಡಿದರು. ಆಗ, 'ಮೊದಲು ಧ್ಯಾನದ ಮೂಲಕ ಶಕ್ತಿಶಾಲಿಯಾಗಬೇಕು' ಎಂದು ಮಹಾರಾಜರು ಸೂಚಿಸಿದರು. ನಂತರ ಜಮಖಂಡಿ ಬಳಿಯ ಸಾವಳಗಿ ಶಿವಲಿಂಗೇಶ್ವರ ಗುಡ್ಡದಲ್ಲಿ, ಮುಧೋಳ ತಾಲ್ಲೂಕಿನ ಬೆಳಗಲಿಯಲ್ಲಿ, ಹುಬ್ಬಳ್ಳಿಯ ಗಿರೀಶ ಆಶ್ರಮದಲ್ಲಿ ಮತ್ತು ಧಾರವಾಡದ ನಿರ್ಜನ ಪ್ರದೇಶದಲ್ಲಿ ದೇವರು ಧ್ಯಾನಯೋಗದಲ್ಲಿ ತಲ್ಲೀನರಾಗಿದ್ದರು.

೧೯೩೪ರಲ್ಲಿ ಶ್ರೀ ಗಿರಿಮಲ್ಲೇಶ್ವರ ಮಹಾರಾಜರು ದೇಹತ್ಯಾಗ ಮಾಡಿದ ನಂತರ ೧೯ ವರ್ಷ ವಯಸ್ಸಿನ ಮಹಾದೇವರು, ಇಂಚಗೇರಿ ಸಂಪ್ರದಾಯದ ಉತ್ತರಾಧಿಕಾರತ್ವದ ಜವಾಬ್ದಾರಿಯನ್ನು ವಹಿಸಿಕೊಂಡ ತಂದೆಯವರಿಗೆ ಬಲಗೈಯಾಗಿ ನಿಂತರು. ಸಮರ್ಪಣಾಭಾವದಿಂದ ಸೇವೆಯಲ್ಲಿ ಮಗ್ನರಾದರು. ಹೀಗೆ ಅವರು ಸದ್ಗುರು ಗಿರಿಮಲ್ಲೇಶ್ವರ ಮಹಾರಾಜರ ಪಾರಮಾರ್ಥಿಕ ಚಿಂತನೆಗಳ ಪ್ರಭಾವಕ್ಕೆ ಒಳಗಾಗಿ ತತ್ತ್ವಜ್ಞಾನಕ್ಕೆ ತಮ್ಮ ಬದುಕನ್ನು ಸಮರ್ಪಿಸಿಕೊಂಡರು. ಇಂಚಗೇರಿ ಶ್ರೀಕ್ಷೇತ್ರದ ದೈನಂದಿನ ಜವಾಬ್ದಾರಿಯನ್ನು ವಹಿಸಿಕೊಂಡು ಲೋಕಹಿತಾರ್ಥದ ಸಂಕೇತವಾಗಿ ಬೆಳೆದರು.

ಪಾರಮಾರ್ಥಿಕ ಚಿಂತನೆ ಜೊತೆಗೆ ಜನರ ಆರ್ಥಿಕ ಚಿಂತನೆ ಮತ್ತು ದೇಶದ ಸ್ವಾತಂತ್ರ್ಯದ ಚಿಂತನೆ ಮಾಡುತ್ತ ಪರಿಹಾರ ಕಂಡುಹಿಡಿಯುವುದು ಅವರ ಜೀವನದ ಉದ್ದೇಶವಾಯಿತು. ೧೯೬೦ರಲ್ಲಿ ಶಿವಪ್ರಭು ಮಹಾರಾಜರ ದೇಹತ್ಯಾಗದ ನಂತರ ದೇವರು ಉತ್ತರಾಧಿಕಾರಿಯಾದರು. ದೇಶದಲ್ಲಿ ನಡೆಯುತ್ತಿದ್ದ ಸ್ವಾತಂತ್ರ್ಯ ಚಳವಳಿ ಮತ್ತು ಜನರ ಆತಂಕದ ಬದುಕಿನ ಹಿನ್ನೆಲೆಯಲ್ಲಿ ಆರ್ಥಿಕ ದುಸ್ಥಿತಿಯನ್ನು ಎದುರಿಸುತ್ತಿದ್ದ ಸಂದರ್ಭದಲ್ಲಿ ಇಂಚಗೇರಿ ಮಠದ ನೇತೃತ್ವವನ್ನು ಮಹಾದೇವರು ವಹಿಸಿಕೊಂಡರು. 'ಜನರ ಸೇವೆಯೆ ಜನಾರ್ದನನ ಸೇವೆ' ಎಂಬ ದೀಕ್ಷೆಗೆ ಬದ್ಧರಾಗಿದ್ದ ಅವರು ಉಳಿದ ಅನೇಕ ಮಠಗಳ ಸ್ವಾಮಿಗಳಂತೆ ಬ್ರಿಟಿಷ್ ಸರ್ಕಾರದ ಕೃಪಾಕಟಾಕ್ಷಕ್ಕೆ ಒಳಗಾಗಿ ಮಠದ ಆರ್ಥಿಕ ಪರಿಸ್ಥಿತಿ ಸುಧಾರಿಸುವ ಯೋಚನೆ ಮಾಡಲಿಲ್ಲ. ಜನಶಕ್ತಿಯೊಂದಿಗೆ ಮಠವನ್ನು ಬೆಳೆಸುತ್ತ ಆರ್ಥಿಕ ಸ್ವಾವಲಂಬನೆ ಸಾಧಿಸುವ ನಿರ್ಧಾರವನ್ನು ಕೈಗೊಂಡರು. ಅದೇ ಜನಶಕ್ತಿಯನ್ನು ಮೂಢನಂಬಿಕೆ, ಶೋಷಣೆ ಮತ್ತು ಬ್ರಿಟಿಷ್ ಸಾಮ್ರಾಜ್ಯಶಾಹಿ ವಿರುದ್ಧದ ಹೋರಾಟಕ್ಕೆ ಅಣಿಗೊಳಿಸುವ ಮೂಲಕ ರಾಷ್ಟ್ರಧರ್ಮ ದ್ರಷ್ಟಾರರಾದರು.

ಇಂಚಗೇರಿ ಮಠದ ಹಿನ್ನೆಲೆ

ಸಿದ್ಧಗಿರಿಮಠದ ಸಿದ್ಧಸಂಪ್ರದಾಯವೊಂದು ಇತರ ಸಿದ್ಧ ಸಂಪ್ರದಾಯಗಳಿಂದ ಪ್ರತ್ಯೇಕವಾಗಿ ಬೆಳೆದು ಬಂದಿದೆ. ಕಾಡಸಿದ್ಧೇಶ್ವರರು ಈ ಸಿದ್ಧಗಿರಿಮಠದ ಪೀಠಾಧಿಕಾರಿಯಾಗಿದ್ದರು. 'ಕಾಡನೊಳಗಾದ ಶಂಕರಪ್ರಿಯ ಚೆನ್ನ ಕದಂಬಲಿಂಗ ನಿರ್ಮಾಯ ಪ್ರಭುವೆ' ಎಂಬ ಅಂಕಿತದಿಂದ ಇವರು ಬರೆದ ೫೦೦ ವಚನಗಳು ಸಿಕ್ಕಿವೆ. ಈ ವಚನಗಳಲ್ಲಿ ಅನೇಕ ಉರ್ದು ಪದಗಳಿವೆ. ಇವರು ಅಂಬಿಗರ ಚೌಡಯ್ಯನವರ ಹಾಗೆ ಸ್ಪಷ್ಟವಾದಿ ವಚನಕಾರರಾಗಿದ್ದರು.

'ಭಕ್ತನಾದಮೇಲೆ ಗುರುವಿಗೆ ತನುವ ನೀಡಬೇಕು,
ಲಿಂಗಕ್ಕೆ ಮನವ ನೀಡಬೇಕು,
ಜಂಗಮಕ್ಕೆ ಧನವ ನೀಡಬೇಕು.
ಇಂತೀ ತ್ರಿವಿಧವ ತ್ರಿವಿಧಕ್ಕೆ ಕೊಟ್ಟು
ಹೊಲಗೇರಿಯ ಹೊಕ್ಕು ಕುಲಗೆಟ್ಟವನೇ ಭಕ್ತ ಕಾಣಾ,
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ.'

ಎಂಬ ಕಾಡಸಿದ್ಧೇಶ್ವರರ ವಚನ ೨೦ನೇ ಶತಮಾನದ ಮಹಾದೇವರ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಯಂತಿದೆ. ಮಹಾದೇವರು ಗುರು ಗಿರಿಮಲ್ಲೇಶ್ವರ ಮಹಾರಾಜರಿಗೆ ತಮ್ಮನ್ನು ಅರ್ಪಿಸಿಕೊಂಡಿದ್ದರು. ಪಾರಮಾರ್ಥವೆಂಬ ಲಿಂಗಕ್ಕೆ ಮನವ ನೀಡಿದ್ದರು.

ಸಮಾಜವೆಂಬ ಜಂಗಮಕ್ಕೆ ಧನವ ನೀಡಿದ್ದರು. ಹೊಲಗೇರಿ ಹೊಕ್ಕು ಸರ್ವಜಾತಿಗಳನ್ನು ಒಂದು ಮಾಡಿದರು. ಕುಲಗೆಡಿಸಿ ದೇವಕುಲವನ್ನು ಅಂದರೆ ಜಾತಿ ವಿಜಾತಿಗಳಿಲ್ಲದ ಮಹಾಸಂಕುಲವನ್ನು ಇಂಚಗೇರಿಯಲ್ಲಿ ಸೃಷ್ಟಿಸಿ ತೋರಿಸಿದರು.

ಕಾಡಸಿದ್ಧೇಶ್ವರರು ಈ ಸಂಪ್ರದಾಯದ ಬೀಜಸ್ವರೂಪಿಗಳಾದರೆ ನಿಂಬರಗಿಯ ಸಮರ್ಥ ಸದ್ಗುರು ಗುರುಲಿಂಗಜಂಗಮ ಮಹಾರಾಜರು ಇಂಚಗೇರಿ ಸಂಪ್ರದಾಯದ ಮೊದಲನೆಯ ಗುರುಗಳಾದರು. ನಂತರ ಬಂದವರು ಉಮದಿಯ ಭಾವುಸಾಹೇಬ ಮಹಾರಾಜರು. ೧೮೮೫ರಲ್ಲಿ ನಿಂಬರಗಿಯಲ್ಲಿ ದೇಹತ್ಯಾಗ ಮಾಡಿದ್ದ ಸದ್ಗುರು ಗುರುಲಿಂಗಜಂಗಮ ಮಹಾರಾಜರ ಅಸ್ಥಿಯನ್ನು ಶ್ರೀ ಭಾವುಸಾಹೇಬ ಮಹಾರಾಜರು ಇಂಚಗೇರಿಗೆ ತಂದು ಸಮಾಧಿ ನಿರ್ಮಿಸಿದರು.

ಗುರುಲಿಂಗಜಂಗಮ ಮಹಾರಾಜರು ನಿಂಬರಗಿಯಿಂದ ೧೧ ಕಿಲೊ ಮೀಟರ್ ದೂರದ ಇಂಚಗೇರಿಯಲ್ಲಿ ಕುರಿ ಕಾಯುತ್ತ ಧ್ಯಾನ ಮಾಡುತ್ತಿದ್ದರಿಂದ ಭಾವುಸಾಹೇಬ ಮಹಾರಾಜರು ಇಂಚಗೇರಿಯನ್ನು ಶ್ರೀಕ್ಷೇತ್ರವಾಗಿಸಿದರು. ನಂತರ ಜಮಖಂಡಿಯ ಶ್ರೀ ಗಿರಿಮಲ್ಲೇಶ್ವರ ಮಹಾರಾಜರು, ಹುಬ್ಬಳ್ಳಿಯ ಶ್ರೀ ಶಿವಪ್ರಭು ಮಹಾರಾಜರು ಉತ್ತರಾಧಿಕಾರಿಗಳಾದರು. ಸದ್ಗುರು ಮಾಧವಾನಂದ ಪ್ರಭುಗಳು (ಮುರಗೋಡ ಮಹಾದೇವರು) ಐದನೆಯ ಉತ್ತರಾಧಿಕಾರಿಗಳು. ತದನಂತರ ಶ್ರೀ ಗುರುಪುತ್ರೇಶ್ವರ ಮಹಾರಾಜರು, ಶ್ರೀ ಜಗನ್ನಾಥ ಮಹಾರಾಜರು ಉತ್ತರಾಧಿಕಾರಿಯಾದರು. ಸದ್ಯ ಶ್ರೀ ರೇವಣಸಿದ್ಧೇಶ್ವರ ಮಹಾರಾಜರು ಎಂಟನೆಯ ಉತ್ತರಾಧಿಕಾರಿಗಳಾಗಿದ್ದಾರೆ.

ಇಂಚಗೇರಿ ಸಂಪ್ರದಾಯದ ಗುರುಮಹಾರಾಜರೆಲ್ಲರನ್ನು ಸಮರ್ಥ ಸದ್ಗುರುಗಳೆಂದು ಕರೆಯುತ್ತಾರೆ. ದೇವರನ್ನು ಭಕ್ತರು ಪ್ರೀತಿಯಿಂದ ನಿಜರಾಜಯೋಗಿ ಸಮರ್ಥ ಸದ್ಗುರು ಮಾಧವಾನಂದ ಪ್ರಭುಗಳು ಎಂದು ಕರೆಯುತ್ತಿದ್ದರು.

ನವಸಮಾಜದ ಪ್ರತೀಕವಾದ ಇಂಚಗೇರಿ ಆಶ್ರಮ

ಇಂಚಗೇರಿ ಮಠವನ್ನು ಸೋಮಾರಿಗಳ ತಾಣವಾಗಿಸದೆ ಕಾಯಕಜೀವಿಗಳ ಆಶ್ರಮವನ್ನಾಗಿಸಿದ ಕೀರ್ತಿ ಮಹಾದೇವರಿಗೆ ಸಲ್ಲುತ್ತದೆ. ಇಲ್ಲಿ ಧ್ಯಾನ ಮತ್ತು ಕಾಯಕದ ಜೊತೆ ಜೊತೆಯಾಗಿ ಸಾಗುವಂಥ ವಾತಾವರಣವನ್ನು ನಿರ್ಮಿಸಿದವರು ಮಹಾದೇವರು. ಆಶ್ರಮವು ಸ್ವಯಂಪರಿಪೂರ್ಣ ವ್ಯವಸ್ಥೆಯನ್ನು ಹೊಂದಿರಬೇಕು. ಪರಿಸರವನ್ನು ಉಳಿಸಿ, ಭೂಮಿಯ ಸತ್ವವನ್ನು ಕಾಪಾಡುತ್ತ ಕೃಷಿಯನ್ನು ಬೆಳೆಸಿ, ದೈನಂದಿನ ಬದುಕಿಗೆ ಬೇಕಾದ ಹಾಲು ಹಣ್ಣು ತರಕಾರಿಗಳನ್ನು ಉತ್ಪಾದಿಸಿ, ಲೌಕಿಕ ಶಿಕ್ಷಣದ ಜೊತೆ ಪಾರಮಾರ್ಥಿಕ ಜ್ಞಾನವನ್ನು ಬೆಳೆಸಿಕೊಳ್ಳುವ ಒಂದು ಪ್ರಯೋಗ ಶಾಲೆಯಾಗಿ ಇಂಚಗೇರಿ ಆಶ್ರಮ ಬೆಳೆಯಿತು. ಇಂಚಗೇರಿ ಮಠದ ಜಮೀನಿನಲ್ಲಿ ಸದ್ಗುರು ಸಮರ್ಥ ಮಾಧವಾನಂದ ಪ್ರಭೂಜಿ ಸಮೇತ ಪ್ರತಿಯೊಬ್ಬರು ಶ್ರಮವಹಿಸಿ ದುಡಿದು ಸ್ವಾವಲಂಬನೆಯನ್ನು ಸಾಧಿಸಿದರು.

ಭಕ್ತಿ, ಧ್ಯಾನ ಮತ್ತು ಕಾಯಕ ಕ್ಷೇತ್ರವಾದ ಇಂಚಗೇರಿ ಆಶ್ರಮ ಪ್ರಶಾಂತವಾದ ನಿಸರ್ಗಧಾಮದಂತಿದೆ. ಗುರುಗಳ ಸಮಾಧಿ ಮಂದಿರ, ಪ್ರಸಾದನಿಲಯ ಮುಂತಾದ ಕಟ್ಟಡಗಳು, ಹೂ ಹಣ್ಣುಗಳ ತೋಟ, ಗೋಶಾಲೆ ಮತ್ತು ಜಲಾಶಯದಿಂದ ಕಂಗೊಳಿಸುತ್ತಿದೆ.

ಇಂಚಗೇರಿಯಿಂದ ೨೫ ಕಿಲೊ ಮೀಟರ್ ದೂರದ ೪೦೦ ಎಕರೆಗಳಷ್ಟು ಒಣಭೂಮಿಯಲ್ಲಿ ನೂರಾರು ಜನ ಆಶ್ರಮವಾಸಿಗಳು ಸೇರಿ ಗಿರೀಶ ಫಾರ್ಮ್ ನಿರ್ಮಿಸಿ ಹಸಿರಿನಿಂದ ನಳನಳಿಸುವಂತೆ ಮಾಡಿದ್ದಾರೆ. ಸಾಮೂಹಿಕ ಕೃಷಿಕಾರ್ಯ ಮಾಡುತ್ತ ಭೇದಭಾವವಿಲ್ಲದೆ ಒಂದಾಗಿ ಬದುಕುತ್ತ ಐಹಿಕ ಮತ್ತು ಪಾರಮಾರ್ಥಿಕ ಬದುಕನ್ನು ಸಾಗಿಸುತ್ತಿರುವ ಕ್ರಮ ದೇಶದಲ್ಲೇ ಮೊದಲನೆಯದು ಎಂಬ ಭಾವ ಮೂಡದೆ ಇರದು. ಗಾಂಧೀಜಿಯವರ ಮೊಮ್ಮಗ ಅರುಣ ಗಾಂಧಿ ಅವರು ಆಶ್ರಮಕ್ಕೆ ಭೇಟಿ ನೀಡಿದಾಗ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರು. ಆಧುನಿಕ ಕೃಷಿಯ ಪ್ರಾಯೋಗಿಕ ಕ್ಷೇತ್ರ ಇದಾಗಿದೆ. ಸಾವಿರಾರು ಗಿಡಮರಗಳಿಗೂ ಇದು ತಾಣವಾಗಿದೆ.

ಇಲ್ಲಿ ಎಲ್ಲ ಜಾತಿ ಮತ್ತು ಧರ್ಮಗಳಿಂದ ಹೊರಬಂದವರು ಜಾತ್ಯತೀತರಾಗಿ, ಮಾನವಧರ್ಮದವರಾಗಿ ಬದುಕುತ್ತಿದ್ದಾರೆ. ಜೈನ, ಲಿಂಗಾಯತ, ಬ್ರಾಹ್ಮಣ, ಹೊಲೆ ಮಾದಿಗ ಮುಸ್ಲಿಂ ಮುಂತಾದ ಜಾತಿ ಧರ್ಮದವರು ಇಲ್ಲಿದ್ದಾರೆ. ವಿವಿಧ ನದಿಗಳು ಸಾಗರವನ್ನು ಸೇರಿ ತಮ್ಮ ನಾಮರೂಪಗಳನ್ನು ಕಳೆದುಕೊಂಡು ಸಾಗರವೇ ಆಗುವಂತೆ ಇವರೆಲ್ಲ ಪೂರ್ವಾಶ್ರಮದ ಕುರುಹುಗಳನ್ನು ಕಳೆದುಕೊಂಡು ಸಹಜೀವನದ ಮಾನವೀಯ ಸಾಗರದಲಿ ಒಂದಾಗಿ ಹೋಗಿದ್ದಾರೆ. ಇದೇ ಆಶ್ರಮದಲ್ಲಿ ಸಾವಿರಾರು ಅಂತರ್ಜಾತೀಯ ವಿವಾಹಗಳು ಜರುಗಿವೆ. ಬದುಕಿನ ವಿವಿಧ ಪ್ರಕಾರದ ಹೊಡೆತಗಳಿಂದ ಕಷ್ಟಕ್ಕೀಡಾದವರು ಇಲ್ಲಿ ಬಂದು ದುಡಿದು ಸಹಭೋಜನ ಮಾಡುತ್ತ ಸ್ವಾವಲಂಬಿಗಳಾಗಿದ್ದಾರೆ. ಮಾರ್ಕ್ಸ್‌ನ ಸಮತಾವಾದ, ಬಸವಾದಿ ಶರಣರ ನಡೆ ನುಡಿ ಸಿದ್ಧಾಂತದಿಂದ ಕೂಡಿದ ಅರಿವು-ಆಚಾರ, ಗಾಂಧೀಜಿಯ ಗ್ರಾಮ ಸ್ವರಾಜ್ಯ ಮತ್ತು ವಿನೋಬಾ ಭಾವೆ ಅವರ ಸರ್ವೋದಯದ ಸಂಗಮವಾಗಿದೆ ಇಂಚಗೇರಿ ಆಶ್ರಮ.

ಕರ್ನಾಟಕದ ವಿಜಯಪುರ ಮತ್ತು ಮಹಾರಾಷ್ಟ್ರದ ಸಾಂಗಲಿ ಗಡಿಭಾಗದಲ್ಲಿರುವ ಇಂಚಗೇರಿ ಕ್ಷೇತ್ರಕ್ಕೆ ಎರಡೂ ರಾಜ್ಯಗಳಿಂದಲ್ಲದೆ ದೇಶದ ವಿವಿಧ ಭಾಗಗಳಿಂದ ಕೂಡ ಭಕ್ತರು ಬರುತ್ತಲೇ ಇರುತ್ತಾರೆ. ಈ ಭಕ್ತಿಪಂಥದಲ್ಲಿ ಹರಿ ಹರ ಮತ್ತು ದ್ವೈತ ಅದ್ವೈತದ ಗೊಂದಲಗಳಿಲ್ಲ. ಧ್ಯಾನ, ತಪಸ್ಸು, ಕೀರ್ತನೆ, ಭಜನೆ, ಸಮರ್ಥ ರಾಮದಾಸರ 'ದಾಸಬೋಧ' ಪಾರಾಯಣದೊಂದಿಗೆ ಭಾವೈಕ್ಯದ ಬದುಕನ್ನು ದೇಶಪ್ರೇಮ ಮತ್ತು ಲೋಕಪ್ರೇಮದೊಂದಿಗೆ ಸಾಗಿಸುತ್ತ ಸರ್ವಜೀವ ದಯಾಭಾವದೊಂದಿಗೆ ಪರಮಾರ್ಥವನ್ನು ಸಾಧಿಸುವುದೇ ಇಲ್ಲಿನ ಮುಖ್ಯ ಉದ್ದೇಶವಾಗಿದೆ.

'ಭಜನಾ ಮಾಡಕೋತ ಕುಂತ್ರ ಏನ ಸಿಗತೈತಿ ಹೊಲಕ್ಕೆ ಹೋಗ್ರಿ, ನಟ್ ಕಡಿರಿ, ಬಾವಿ ತೋಡರಿ, ನೀರ ಹಾಸಿರಿ' ಎಂದು ದೇವರು ಬರಿ ಭಜನೆಯಲ್ಲೇ ತೊಡಗುವ ಅನುಯಾಯಿಗಳಿಗೆ ಎಚ್ಚರಿಸುತ್ತಿದ್ದರು. ಅವರು ಲೌಕಿಕ ಮತ್ತು ಆಗಮಿಕದ ಸಂಗಮವಾಗಿದ್ದರು. ಭೌತಿಕ ಜಗತ್ತನ್ನು ಧ್ಯಾನಯೋಗದ ಸ್ಪರ್ಶದಿಂದ ಚೈತನ್ಯಾತ್ಮಕವಾಗಿಸುವುದರಲ್ಲಿ ತೊಡಗಿದ್ದರು.

ಇಂಚಗೇರಿ ಮಠದಲ್ಲಿ ಪ್ರತಿದಿನ ದಾಸೋಹ ವ್ಯವಸ್ಥೆ ಇದೆ. ನಾನಾ ಹಳ್ಳಿಗಳ ಸಹಸ್ರ ಸಹಸ್ರ ಜನರು ಉತ್ಸಾಹದಿಂದ ಪಾದಯಾತ್ರೆ ಮಾಡುತ್ತ ಬಂದು ಸಪ್ತಾಹದಲ್ಲಿ ಭಾಗವಹಿಸುತ್ತಾರೆ. ವರ್ಷದಲ್ಲಿ ಐದು ಬಾರಿ ಸಪ್ತಾಹ ಏರ್ಪಡಿಸಲಾಗುತ್ತದೆ. ಕರ್ನಾಟಕ, ಮಹಾರಾಷ್ಟ್ರ, ಗೋವಾ ಮತ್ತು ಉತ್ತರ ಪ್ರದೇಶದ ಆಗ್ರಾ ಮುಂತಾದ ಕಡೆಗಳಲ್ಲಿ ಸಾವಿರಾರು ಭಜನಾ ಮಂದಿರ ಶಾಖೆಗಳನ್ನು ಈ ಮಠ ಹೊಂದಿದೆ.

ಅನೇಕ ವಿದ್ಯಾರ್ಥಿಗಳು ಈ ಮಠದ ಮೂಲಕ ಕಾನೂನು, ವೈದ್ಯಕೀಯ ಮತ್ತು ಇತರ ಪದವಿಗಳನ್ನು ಪಡೆದವರಾಗಿದ್ದಾರೆ. ದೇವರು ಇದ್ದಾಗಲೇ ನೂರಾರು ಜನ ಈ ಮಠದ ಸಹಾಯ ಪಡೆದು ವಕೀಲರಾಗಿದ್ದಾರೆ. ಸಹಕಾರದಿಂದ ಕೂಡಿದ ಸಹಜೀವನವೇ ಇಂಚಗೇರಿ ಸಂಪ್ರದಾಯದ ಸಂಸ್ಕೃತಿಯಾಗಿದೆ.

ಸ್ವಾಂತಂತ್ರ್ಯ ಸಂಗ್ರಾಮ

ಭಕ್ತಿಪಂಥ ಈ ದೇಶದ ಬುನಾದಿಯಾಗಿದೆ. ಸಂತರು, ಸೂಫಿಸಂತರು, ದಾಸರು, ಶರಣರು ಮತ್ತು ತತ್ತ್ವಪದಕಾರರು ಈ ಭಕ್ತಿಪಂಥದ ಆಧಾರ ಸ್ತಂಭಗಳಾಗಿದ್ದಾರೆ. ಭಾರತದ ಜನಸಾಮಾನ್ಯರು ಈ ಭಕ್ತಿಪಂಥದ ವಾರಸುದಾರರಾಗಿದ್ದಾರೆ. ಭಕ್ತಿಪಂಥದ ಯಾರೇ ಇರಲಿ ಅವರು ವರ್ಣ, ಜಾತಿ ಮತ್ತು ಅಸ್ಪೃಶ್ಯತೆಯ ಆಚರಣೆಗಳಿಗೆ ವಿರುದ್ಧವಾಗಿದ್ದಾರೆ. ಮಾನವಕುಲದಲ್ಲಿ ಭೇದಭಾವ ಮಾಡುವುದನ್ನು ಅವರು ತಿರಸ್ಕರಿಸುತ್ತಾರೆ. ಭಾರತದ ಪ್ರತಿಯೊಬ್ಬರೂ ಅವರಿಗೆ ಭಾರತೀಯರಾಗಿ ಕಾಣುತ್ತಾರೆ ಹೊರತಾಗಿ ಯಾವುದೇ ಜಾತಿ ಧರ್ಮದವರಾಗಿ ಕಾಣುವುದಿಲ್ಲ. ಅದಕ್ಕೂ ಹೆಚ್ಚಾಗಿ ಅವರ ದೃಷ್ಟಿಯಲ್ಲಿ ಪ್ರತಿಯೊಬ್ಬರೂ ಮೂಲದಲ್ಲಿ ವಿಶ್ವಮಾನವರೇ ಆಗಿದ್ದಾರೆ. ಆದ್ದರಿಂದಲೇ ಮಹಾದೇವರು 'ಜೈ ಜಗತ್' ಘೋಷಣೆ ಮಾಡಿದರು.

ಇಂಥ ಸುಂದರ ಭಕ್ತಿಪಂಥದ ನೆಲೆಯಾದ ಭಾರತವನ್ನು ಬ್ರಿಟಿಷರ ಕಪಿಮುಷ್ಟಿಯಿಂದ ಬಿಡಿಸುವುದು ದೇವರಿಗೆ ಅವಶ್ಯವೆನಿಸಿತು. ಅವರು ರಾಜಕೀಯವನ್ನು ಇಷ್ಟಪಡದಿದ್ದರೂ ರಾಜನೀತಿಯಲ್ಲಿ ನಂಬಿಕೆಯುಳ್ಳವರಾಗಿದ್ದರು. ರಾಜಕೀಯ ತತ್ತ್ವಜ್ಞಾನದ ಅವಶ್ಯಕತೆಯನ್ನು ಅವರು ಮನಗಂಡಿದ್ದರು.

ಗಾಂಧೀಜಿಯವರು ಮತ್ತು ಅಂಬೇಡ್ಕರರಿಗೆ ಕೂಡ ಭಕ್ತಿಪಂಥದ ಹಿನ್ನೆಲೆಯಿತ್ತು. ಗಾಂಧೀಜಿಯವರಿಗೆ 'ಪರರ ದುಃಖ ಅರಿಯಿರಿ' ಎಂದು ಹಾಡಿದ ವೈಷ್ಣವೀ ಸಂತ ನರಸೀ ಮೆಹತಾ ಅವರ ಹಿನ್ನೆಲೆ ಇದೆ. ಅಂಬೇಡ್ಕರರಿಗೆ 'ರಾಮ ರಹೀಮ ಒಬ್ಬರೇ' ಎಂದು ಹೇಳಿದ ಕಬೀರ ಪಂಥದ ಹಿನ್ನೆಲೆಯಿದೆ.

ಸರ್ವೋದಯವು ಭಕ್ತಿಪಂಥದ ಆತ್ಮವಾಗಿದೆ. ಮಾನವ ಪಾರಮಾರ್ಥಿಕ ಮತ್ತು ಐಹಿಕ ಅಭ್ಯುದಯವನ್ನು ಸಾಧಿಸಬೇಕಾದರೆ ದೇಶದಲ್ಲಿ ಅದಕ್ಕೆ ಪೂರಕವಾದ ರಾಜನೀತಿ ಇರುವುದು ಅವಶ್ಯವಾಗಿದೆ ಎಂಬುದನ್ನು ಮನಗಂಡ ದೇವರು ಗಾಂಧೀಜಿಯವರ ಸ್ವಾತಂತ್ರ್ಯ ಚಳವಳಿಯಿಂದ ಸ್ಫೂರ್ತಿಗೊಂಡರು. ದೇಶಭಕ್ತಿಯ ಬಗ್ಗೆ ಆಶ್ರಮವಾಸಿಗಳಿಗೆ ತಿಳಿಹೇಳುವ ಮೂಲಕ ಅವರಲ್ಲಿ ಹೋರಾಟದ ಸ್ಫೂರ್ತಿ

ತುಂಬಿದರು. ಹೀಗೆ ಭಕ್ತಿಪಂಥದ ಜನಸಮುದಾಯವನ್ನು ರಾಜಕೀಯ ಕಡೆಗೆ ತಿರುಗಿಸಿ ದೇಶದ ವಿಮೋಚನೆಗಾಗಿ ಅವರು ಜೀವದ ಹಂಗು ತೊರೆದು ಚಳವಳಿಯಲ್ಲಿ ಧುಮುಕುವಂತೆ ಮಾಡಿದ್ದು ದೇಶದ ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡುವಂಥದ್ದಾಗಿದೆ.

ಗಾಂಧೀಜಿಯವರ ಚಿಂತನೆಗಳನ್ನು ಅನುಷ್ಠಾನಕ್ಕೆ ತರುವುದಕ್ಕಾಗಿ ಮೊದಲಿಗೆ ಅವರೇ ಸತ್ಯಾಗ್ರಹದಲ್ಲಿ ಧುಮುಕಿದರು. ೧೯೪೨ರ ಚಲೇಜಾವ್ ಚಳವಳಿಯಲ್ಲಿ ಅವರ ಇಡೀ ಭಕ್ತಸಮೂಹ ಧುಮುಕಿತು. ಇವರ ಚಳವಳಿ ಈ ಉತ್ತರಕರ್ನಾಟಕ ಪ್ರದೇಶದ ಬಿಟಿಷ್ ಆಡಳಿತಕ್ಕೆ ಭಾರೀ ಸವಾಲಾಗಿ ಪರಿಣಮಿಸಿತು. ಚಳವಳಿ ಉಗ್ರಸ್ವರೂಪ ತಾಳಿತು. ಭಕ್ತರು ಭೂಗತರಾಗಿ ಹೋರಾಟವನ್ನು ಮುಂದುವರಿಸಿದರು. ಆ ಸಂದರ್ಭದಲ್ಲಿ ದೇಶದ ಕಾಂಗ್ರೆಸ್ ಕಚೇರಿಗಳಿಗೆ ಪೊಲೀಸರು ಬೀಗ ಹಾಕಿದರು. ಇಂಚಗೇರಿ ಆಶ್ರಮದ ಮೇಲೂ ಪೊಲೀಸರ ಕೆಂಗಣ್ಣು ಬಿದ್ದಿತು. ಭಕ್ತರ ಚಲನವಲನಗಳ ಮೇಲೆ ನಿಗಾ ಇಡುವುದಕ್ಕಾಗಿ ಪೊಲೀಸರನ್ನು ನೇಮಿಸಲಾಯಿತು. ಭಕ್ತರು ಆಶ್ರಮದಲ್ಲಿ ಹೋಗಲಾರದಂಥ ಪರಿಸ್ಥಿತಿ ಉಂಟಾಯಿತು. ಈ ಚಳವಳಿ ಭಕ್ತಿಮಾರ್ಗ ಅಲ್ಲ ಎಂದು ಕೆಲವರು ಭಕ್ತರು ಗೊಣಗಿದರು. ಮತ್ತೆ ಕೆಲಭಕ್ತರಿಂದ ವಿರೋಧ ವ್ಯಕ್ತವಾಯಿತು. ಒಳಗೆ ಈ ಪರಿಸ್ಥಿತಿ ಉಂಟಾದರೆ ಹೊರಗೆ ಪೊಲೀಸರ ದಬ್ಬಾಳಿಕೆ ವಿಪರೀತವಾಯಿತು. ಆದರೆ ದೇವರು ಇದಾವುದಕ್ಕೂ ಬಗ್ಗದೆ ಸ್ವಾತಂತ್ರ್ಯ ಚಳವಳಿಯನ್ನು ಮುಂದುವರಿಸಿಕೊಂಡು ಹೋದರು.

ಸರ್ಕಾರಿ ಆಡಳಿತ ಕುಸಿಯುವ ರೀತಿಯಲ್ಲಿ ಟೆಲಿಗ್ರಾಮ ತಂತಿಗಳನ್ನು ಕತ್ತರಿಸುವುದು, ಇನ್ಸ್‌ಪೆಕ್ಷನ್ ಬಂಗಲೆ, ಅಂಚೆಕಚೇರಿ ಮತ್ತು ರೈಲುನಿಲ್ದಾಣಗಳಿಗೆ ಬೆಂಕಿ ಹಚ್ಚುವುದು ಮುಂತಾದ ತೀವ್ರತರ ಚಟುವಟಿಕೆಗಳು ದೇಶಾದ್ಯಂತ ಆರಂಭವಾಗಿದ್ದವು. ದೇವರು ಕೂಡ ಭಕ್ತರ ಜೊತೆಗೂಡಿ ಇಂಥ ಸಾಹಸ ಮಾಡುತ್ತ ಬ್ರಿಟಿಷ್ ಆಡಳಿತಕ್ಕೆ ಕಿರಿಕಿರಿ ಉಂಟುಮಾಡಿದರು. ಇವರ ಉಗ್ರ ಹೋರಾಟದಲ್ಲಿ ಇಂಚಗೇರಿ ಸಂಪ್ರದಾಯದ ಮಹಿಳೆಯರು ಕೂಡ ಭಾಗವಹಿಸಿದ್ದು ಚರಿತಾರ್ಹವಾಗಿದೆ.

"ಮಹಾದೇವರ ಸ್ವಾತಂತ್ರ್ಯ ಚಳವಳಿ ಮತ್ತು ಏಕೀಕರಣ ಚಳವಳಿಗಳಲ್ಲಿ ನಾನೂ ಇದ್ದೆ. ೧೯೪೨–೪೩ ಇರಬೇಕು; ನಾನು, ಗಿರಿಜೆವ್ವ ಅಂಗಡಿ, ಮಹಾದೇವಿ ಮಸಳಿ ಕೂಡಿ ಕೆಲಸ ಮಾಡುತ್ತಿದ್ದೆವು. ದೇವರು ಪ್ಲ್ಯಾನು ಹಾಕಿಕೊಡುತ್ತಿದ್ದರು. ಅವರು ಹೇಳಿದಂಗ ಮಾಡೂದು. ನಮ್ಮ ದಗದ(ಕೆಲಸ) ರೈಲು ಕೆಡುವುದು, ತಂತಿ ಕಂಬಿ ಕಿತ್ತುವುದು.

“ಪಂಢರಪುರದ ದಾರಿಯಲ್ಲಿ ಮಂಗಳವೇಡೆ, ಏಕಲಾಪೂರ ಸಿದ್ಧವಾಡಿ, ಮಲ್ಲವಾಡಿ ಅಂತಿವೆ. ಅಲ್ಲಿ ನಾವು ಹೆಂಗಸರೇ ಕೂಡಿ ಕಂಬ ಏರಿ ಟೆಲಿಫೋನ್ ತಂತಿ ಕತ್ತರಿಸಿದೆವು. ಸೊಲ್ಲಾಪುರ ಮಾರ್ಗದಲ್ಲಿ ನಿಂಬಾಳ ರೈಲು ನಿಲ್ದಾಣವಿದೆ. ಬೋಲ್ಟ್ ತೆಗೆದು ಹಳಿ ಬಿಡಿಸಿ ಒಂದು ಗೂಡ್ಸ್ ಗಾಡಿ ಕೆಡವಿದೆವು. .. .. ಮನುಷ್ಯರ ಗಾಡಿಯನ್ನು ಕೆಡವಿದ್ದರೆ ಪ್ರಾಣಹಾನಿ ಆಗುತ್ತಿತ್ತೆಂದು ದೇವರು ಗೂಡ್ಸ್ ಗಾಡಿ ಕೆಡವಿಸಿದರು.” ಎಂದು ವೀರಮ್ಮಾ ಶಿರಹಟ್ಟಿಮಠ ಅವರು ತಿಳಿಸಿದ್ದಾರೆ. ವೀರಮ್ಮನವರು ಕೂಡ ದೇವರು ಜನಿಸಿದ ಹುಬ್ಬಳ್ಳಿಯ ವೀರಾಪುರ ಓಣಿಯಲ್ಲಿ ಜನಿಸಿದವರು. ದೇವರಿಗಿಂತ ಐದು ವರ್ಷ ಚಿಕ್ಕವರಾಗಿದ್ದ ಅವರು ಬಾಲ್ಯದಿಂದಲೂ ಅವರ ಜೊತೆ ಬೆಳೆದು, ಇಂಚಗೇರಿ ತತ್ತ್ವಕ್ಕೆ ಬದ್ಧರಾಗಿ ಜೀವನವಿಡಿ ಸೇವೆಯಲ್ಲಿ ಕಳೆದ ವಿರಾಗಿಣಿ.

ರಾಜಕೀಯ ನಾಯಕರ ಉದಾಸೀನತೆ ಮತ್ತು ಪೊಲೀಸರ ಕುತಂತ್ರದಿಂದಾಗಿ ಜಮಖಂಡಿ, ನಾಸಿಕ್ ಮತ್ತು ಪುಣೆಯ ಜೈಲುಗಳಲ್ಲಿ ಉಳಿಯಬೇಕಾಯಿತು. ಅವರು ಒಟ್ಟು ೨೭ ಸಲ ಜೈಲಿಗೆ ಹೋದರೂ ನಿರ್ದೋಷಿಗಳಾಗಿ ಹೊರಬಂದರು!

ಇಂಚಗೇರಿ ಸಂಪ್ರದಾಯದ ಸುಮಾರು ೨೦೦ ಮಂದಿ ಭಕ್ತರು ೧೯೪೨ರಿಂದ ೧೯೪೭ರ ವರೆಗೆ ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿದ್ದರು. ಇವರೆಲ್ಲರ ಊಟ ಬಟ್ಟೆ ಮುಂತಾದ ಖರ್ಚನ್ನು ನಿಭಾಯಿಸುವ ಹೊಣೆ ದೇವರ ಮೇಲಿತ್ತು. ಈ ಸಮಸ್ಯೆ ಅವರಿಗೆ ಬಹಳ ಕಾಡಿತು. ಇಂಚಗೇರಿ ಸಂಪ್ರದಾಯದ ಶ್ರೀಮಂತರು ಆರ್ಥಿಕ ಸಹಾಯವನ್ನು ತಕ್ಕಮಟ್ಟಿಗೆ ಮಾಡುತ್ತ ಬಂದರು. ನಂತರದ ದಿನಗಳಲ್ಲಿ ಈ ಸಹಾಯ ಕುಂಠಿತಗೊಳ್ಳತೊಡಗಿತು. ಭೂಗತ ಹೋರಾಟಗಾರರಿಗೆ ಅನ್ನ ಬಟ್ಟೆ ಒದಗಿಸುವುದು ಕಷ್ಟದ ಕೆಲಸವಾಯಿತು. ಬ್ರಿಟಿಷರಿಗೆ ಸಹಾಯಕವಾಗಿದ್ದ ಶ್ರೀಮಂತರು ಮತ್ತು ಪೊಲೀಸ ಪಾಟೀಲರನ್ನು ಹೆದರಿಸಿ ಅವರು ಸಂಗ್ರಹಿಸಿ ಇಟ್ಟುಕೊಂಡಿದ್ದ ಆಹಾರ ಧಾನ್ಯಗಳನ್ನು ಪಡೆದುಕೊಂಡು ಭೂಗತ ಸ್ವಾತಂತ್ರ್ಯ ಹೋರಾಟಗಾರರಿಗೆ ತಲುಪಿಸುವುದು ಅನಿವಾರ್ಯವಾಯಿತು. ಸ್ವಾತಂತ್ರ್ಯ ಹೋರಾಟಕ್ಕೆ ದ್ರೋಹ ಬಗೆಯುತ್ತಿರುವವರಿಗೆ ದಂಡಿಸುವ ಕ್ರಮ ಕೂಡ ಇದಾಗಿತ್ತು. ಪೊಲೀಸರು ಸೇಡಿನ ಮನೋಭಾವದಿಂದ ಈ ಹೋರಾಟಗಾರರನ್ನು ‘ದರೋಡೆಕೋರರು’ ಎಂದು ಪ್ರಕರಣ ದಾಖಲು ಮಾಡಿದರು. ಈ ಘಟನೆಗಳ ನೆಪ ಮಾಡಿಕೊಂಡು ಸ್ವಾರ್ಥಿಗಳು ದೇವರ ಹೆಸರು ಕೆಡಿಸಲು ಯತ್ನಿಸಿದರು.

ಹೈದರಾಬಾದ ವಿಲೀನಕ್ಕಾಗಿ ಚಳವಳಿ

೧೯೪೭ನೇ ಆಗಸ್ಟ್ ೧೫ರಂದು ಭಾರತಕ್ಕೆ ಸ್ವಾತಂತ್ರ್ಯ ಬಂದರೂ ನಿಜಾಮರ ಹೈದರಾಬಾದ ಸಂಸ್ಥಾನ ಇನ್ನೂ ಸ್ವತಂತ್ರ ದೇಶವಾಗೇ ಉಳಿದಿತ್ತು. ದೇವರು ತಮ್ಮ ಭಕ್ತರ ಜೊತೆ ಹೈದರಾಬಾದ ವಿಲಿನೀಕರಣ ಹೋರಾಟದಲ್ಲೂ ಭಾಗವಹಿಸಿದರು. ಮುಂಡರಗಿ ಕ್ಯಾಂಪಿನಲ್ಲಿ ಇದ್ದಾಗ ಗಡಿಯಲ್ಲಿ ಘರ್ಷಣೆ ನಡೆದ ವೇಳೆ ಘೂಳಪ್ಪ ಹೊಂಬಳ ಎಂಬ ಅವರ ಅನುಯಾಯಿಗೆ ಎದೆಯ ಬಳಿ ಗುಂಡು ಬಡಿದರೂ ಅವರು ಪ್ರಾಣಾಪಾಯದಿಂದ ಪಾರಾದರು.

ಚೆನ್ನಪ್ಪ ವಾಲಿ ಅವರು ೬೦ ಜನರೊಂದಿಗೆ ಯಲಬುರ್ಗಿ ಕಚೇರಿಗೆ ಮುತ್ತಿಗೆ ಹಾಕಿದರು. ಅಲ್ಲಿಯೂ ಗುಂಡಿನ ಕಾಳಗ ನಡೆಯಿತು. ಗದಿಗೆಪ್ಪಾ ಬೆಳವಡಿ ಎಂಬವರಿಗೆ ಗುಂಡು ತಾಗಿದ್ದರಿಂದಾಗಿ ಅವರು ಒಂದು ಕೈಯನ್ನು ಕಳೆದುಕೊಳ್ಳಬೇಕಾಯಿತು. ಹೋರಾಟಗಾರರು ಹತ್ತು ಗುಂಡು ಹಾರಿಸಿದಾಗ ಕಚೇರಿಯಲ್ಲಿ ಎಷ್ಟೊಂದು ಸಾವು ನೋವುಗಳಾದವು ಎಂಬುದು ತಿಳಿಯಲಿಲ್ಲ. ಬಾಂಬಿನಿಂದಾಗಿ ಹೋರಾಟಗಾರರಲ್ಲಿ ಇನ್ನೊಬ್ಬ ತೀವ್ರ ಗಾಯಗೊಂಡ. ಇದೇ ಗುಂಪು ಕುಕನೂರ ಪೊಲೀಸ್ ಠಾಣೆಗೆ ಹೋಗಿ ಆರು ಬಂದೂಕುಗಳನ್ನು ಕಸಿದುಕೊಂಡು ಬಂದಿತು.

ಗೋವಾ ವಿಮೋಚನೆಗಾಗಿ ಹೋರಾಟ

ಗೋವಾ ಪೋರ್ತುಗೀಜರ ವಶದಲ್ಲಿತ್ತು. ಬ್ರಿಟಿಷರು ಭಾರತ ಬಿಟ್ಟು ತೊಲಗಿದರೂ ಪೋರ್ತುಗೀಜರು ಗೋವಾದಲ್ಲಿ ಉಳಿದುಕೊಂಡಿದ್ದರು. ಭಾರತೀಯರು ಗೋವಾ ವಿಮೋಚನೆಗಾಗಿ ಕೂಡ ಹೋರಾಟ ಮಾಡುವುದು ಅನಿವಾರ್ಯವಾಗಿತ್ತು. ೧೯೫೫ನೇ ಆಗಸ್ಟ್ ೯ರಂದು ಹುಬ್ಬಳ್ಳಿಯ ಗಿರೀಶ ಆಶ್ರಮದಲ್ಲಿ ಗೋವಾ ವಿಮೋಚನೆಗಾಗಿ ಹೊರಡುವ ನಿರ್ಣಯ ಕೈಗೊಳ್ಳಲಾಯಿತು. ದೇವರ ನೇತೃತ್ವದ ಗುಂಪು ಸೆಪ್ಟೆಂಬರ್ ೯ರಂದು ಹುಬ್ಬಳ್ಳಿಯಿಂದ ಕಾರವಾರ ತಲುಪಿತು. ಅಲ್ಲಿನ ೬ ಜನ ಇವರ ಗುಂಪಿಗೆ ಸೇರಿದ್ದರಿಂದ ಒಟ್ಟು ೬೭ ಜನರ ಗುಂಪಾಯಿತು. ಸೆಪ್ಟೆಂಬರ್ ೧೦ರಂದು ಬೆಳಿಗ್ಗೆ ೬ ಗಂಟೆಗೆ ಗೋವಾ ರಾಜ್ಯದ ಕಾಣಕೋಣದಲ್ಲಿನ ಕಚೇರಿಯಲ್ಲಿ ಈ ಗುಂಪು ತ್ರಿವರ್ಣ ಧ್ವಜವನ್ನು ಹಾರಿಸಿತು. ಅದೊಂದು ರೋಮಾಂಚನಕಾರಿ ಸಾಹಸವಾಗಿತ್ತು. ಅಲ್ಲಿದ್ದ ಸೈನಿಕರು ಮತ್ತು ಪೊಲೀಸರು ಇವರನ್ನೆಲ್ಲ ಹಿಡಿದು ಧ್ವಜವನ್ನು ಕಿತ್ತುಕೊಂಡರು. ಸೈನಿಕರು ಇವರ ಮೇಲೆ ಗುಂಡು

ಹಾರಿಸಲು ನಿರ್ಧರಿಸಿದರು. ಆದರೆ ಅಲ್ಲಿದ್ದ ಪೊಲೀಸ್ ಅಧಿಕಾರಿ ಹಾಗೆ ಮಾಡಲು ಬಿಡಲಿಲ್ಲ. ಈ ಸಂದರ್ಭದಲ್ಲಿ ಸಾಕಷ್ಟು ಪೆಟ್ಟು ತಿಂದವರಲ್ಲಿ ದೇವರು ಕೂಡ ಇದ್ದರು.

ಅಖಿಲ ಕರ್ನಾಟಕ ರಾಜ್ಯ ನಿರ್ಮಾಣ ಸಮಿತಿ

ಆಗ ಇನ್ನೂ ಭಾಷಾವಾರು ಪ್ರಾಂತಗಳಾಗಿದ್ದಿಲ್ಲ. ಹುಬ್ಬಳ್ಳಿಯ ಗಿರೀಶ ಆಶ್ರಮದಲ್ಲಿ ೧೫೦ ಜನ ಪ್ರಮುಖರು ಸಭೆ ಸೇರಿ ಅಖಿಲ ಕರ್ನಾಟಕ ರಾಜ್ಯ ನಿರ್ಮಾಣ ಸಮಿತಿ ರಚಿಸಲಾಯಿತು. ಅಹಿಂಸಾತ್ಮಕ ರೀತಿಯ ಸತ್ಯಾಗ್ರಹ ಮಾಡಲು ನಿರ್ಧರಿಸಲಾಯಿತು. ಸತ್ಯಾಗ್ರಹ ಪ್ರಾರಂಭಿಸುವ ಉದ್ದೇಶದಿಂದ ಗಿರೀಶ ಆಶ್ರಮದಲ್ಲೇ ಇನ್ನೊಂದು ಸಭೆ ಕರೆಯಲಾಯಿತು. ಆ ಸಭೆಗಾಗಿ ಹುಬ್ಬಳ್ಳಿಗೆ ಬಂದು ಲಾಜಿಂಗ್‌ನಲ್ಲಿ ಉಳಿದುಕೊಂಡಿದ್ದ ಚೆನ್ನಪ್ಪ ವಾಲಿ ಅವರನ್ನು ಪೊಲೀಸರು ಬಂಧಿಸಿ ಬೆಳಗಾವಿಯ ಹಿಂಡಲಗಾ ಜೈಲಿಗೆ ಹಾಕಿದರು. ಅದೇ ದಿನ ದೇವರು ಮತ್ತು ಅವರ ಗುಂಪಿನ ಸದಸ್ಯರನ್ನು ಧಾರವಾಡ ಮತ್ತು ವಿಜಯಪುರ ಜಿಲ್ಲೆಗಳಲ್ಲಿ ಬಂಧಿಸಿದ್ದರು. ಒಟ್ಟು ೨೦ ಮಂದಿ ಹೋರಾಟಗಾರರ ಬಂಧನವಾಗಿತ್ತು. ಕರ್ನಾಟಕ ಏಕೀಕರಣ ಹೋರಾಟದಲ್ಲಿ ಮಹಾದೇವರ ಪಾತ್ರ ಹಿರಿದಾಗಿದೆ. ಏಕೀಕರಣ ಹೋರಾಟದಲ್ಲಿ ಕನಿಷ್ಠ ೧೦ ಸಾವಿರ ಜನರನ್ನು ಬಂಧಿಸಲಾಗಿತ್ತು.

ಕರ್ನಾಟಕ ಏಕೀಕರಣದ ಈ ಹೋರಾಟ ಚಿಕ್ಕ ಸಂಸ್ಥಾನಗಳ ವಿಲಿನೀಕರಣಕ್ಕೆ ದಾರಿ ಸುಗಮ ಮಾಡಿತು. ಆದರೆ ಕಾಂಗ್ರೆಸ್‌ನಲ್ಲಿರುವ ಪಟ್ಟಭದ್ರರಿಗೆ ಇದು ಹಿಡಿಸಲಿಲ್ಲ. ಉತ್ತರ ಕರ್ನಾಟಕದಲ್ಲಿ ಹತ್ತರಷ್ಟು ಬ್ರಾಹ್ಮಣ ಸಂಸ್ಥಾನಿಕರ ಗ್ರಾಮಗಳಿದ್ದವು. ಇವರ ಕಚೇರಿಗಳಲ್ಲಿ ಮರಾಠಿ ಭಾಷೆ ಆಡಳಿತ ಭಾಷೆಯಾಗಿತ್ತು. ಸಾವಿರಾರು ಮರಾಠಿ ಬ್ರಾಹ್ಮಣರು ಇವರ ಕಚೇರಿಗಳಲ್ಲಿನ ವಿವಿಧ ಹುದ್ದೆಗಳಲ್ಲಿದ್ದರು. ಆದ್ದರಿಂದ ಕಾಂಗ್ರೆಸ್‌ನಲ್ಲಿದ್ದ ಹಳೆಸಂಪ್ರದಾಯದ ನಾಯಕರು ಚಳವಳಿಯಲ್ಲಿ ಭಾಗವಹಿಸಲಿಲ್ಲ. ಆದರೆ ಸಾಂಗಲಿ, ಜಮಖಂಡಿ, ಜತ್ ಮತ್ತು ರಾಮದುರ್ಗ ಸಂಸ್ಥಾನಗಳ ವಿಲಿನೀಕರಣಕ್ಕಾಗಿ ನಡೆದ ಹೋರಾಟದಲ್ಲಿ ದೇವರು ಮತ್ತು ಅವರ ಅನುಯಾಯಿಗಳು ಅವಿಶ್ರಾಂತವಾಗಿ ದುಡಿದರು.

ಲೋಕಸೇವಕ ಸಂಘ

ವಿಲಿನೀಕರಣಗೊಂಡ ಸಂಸ್ಥಾನಗಳಲ್ಲಿನ ಹಿಂದುಳಿದ ಜನರ ಏಳ್ಗೆಗಾಗಿ ದುಡಿಯುವ ಉದ್ದೇಶದಿಂದ ಕರ್ನಾಟಕದ ಏಕೀಕರಣವಾದ ಬಳಿಕ ಈ

ಚಳವಳಿಗಾರರಾದ ದೇವರು, ವಾಲಿ ಚೆನ್ನಪ್ಪನವರು, ಷಣ್ಮುಖಪ್ಪ ಅಂಗಡಿ ವಕೀಲರು, ಬಿ. ಎನ್. ಮುನವಳ್ಳಿ ವಕೀಲರು, ಅಳವಂಡಿ ಶಿವಮೂರ್ತಿ ಸ್ವಾಮಿಗಳು ಮುಂತಾದವರು ರಾಜಕೀಯದಲ್ಲಿ ಪಾಲ್ಗೊಳ್ಳ ಬಯಸಿದರು. ಆದರೆ ಬ್ರಾಹ್ಮಣೇತರ ಸಂಸ್ಥಾನ ವಿಲಿನೀಕರಣಕ್ಕಾಗಿ ಇವರೇ ಕಾರಣರು ಎಂಬ ಅಸಹನೆಯಿಂದಾಗಿ ಕಾಂಗ್ರೆಸ್‌ನಲ್ಲಿನ ಆ ಸಮಾಜದ ನಾಯಕರು ಇವರೆಲ್ಲ ಚುನಾವಣೆಗೆ ಸ್ಪರ್ಧಿಸಲು ಅವಕಾಶ ಸಿಗದಂತೆ ನೋಡಿಕೊಂಡರು. ಇದರಿಂದ ಬೇಸರಗೊಂಡ ಚಳವಳಿಗಾರರು ಕಾಂಗ್ರೆಸ್ ತೊರೆದು ಲೋಕಸೇವಕ ಸಂಘ ಸ್ಥಾಪಿಸಿದರು. ದೇವರಿಗೆ ರಾಜಕೀಯ ಸೇರುವ ಮನಸ್ಸಿರಲಿಲ್ಲ. ಆದರೆ ಅವಕಾಶವಾದಿಗಳು ಆಯ್ಕೆಯಾಗಬಾರದು ಎಂಬ ಉದ್ದೇಶದಿಂದ ಅವರು ಚುನಾವಣೆಯಲ್ಲಿ ಸ್ಪರ್ಧಿಸಿದರು.

ಅವರು ಹೀಗೆ ರಾಜಕೀಯ ಮತ್ತು ಸಾಮಾಜಿಕ ಚಳವಳಿಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರೂ ತಮ್ಮ ಭಕ್ತರು ಏರ್ಪಡಿಸುವ ಸಪ್ತಾಹ ಕಾರ್ಯಕ್ರಮಗಳಿಗೆ ಹೋಗುವುದನ್ನು ತಪ್ಪಿಸುತ್ತಿರಲಿಲ್ಲ. ತತ್ತ್ವ ಪ್ರಚಾರಕ್ಕಾಗಿ ಅವರು 'ಸಂತವಾಣಿ' ಪತ್ರಿಕೆಯನ್ನೂ ಆರಂಭಿಸಿದರು. ಬಹುಮುಖ ಪ್ರತಿಭೆಯ ಮಹಾದೇವರಲ್ಲಿ 'ಇಂಚಗೇರಿ ಮಠದ ಮುಖ್ಯಸ್ಥ' ಎಂಬ ಭಾವ ಎಂದೂ ಸುಳಿಯಲಿಲ್ಲ. ಭೇಟಿಗೆ ಬಂದವರಿಗೆ ಮೊದಲು ನಮಸ್ಕಾರ ಮಾಡುವ ಸೌಜನ್ಯ ಅವರದಾಗಿತ್ತು. ಎಲ್ಲರೊಡನೆ ಒಂದಾಗಿ ಬದುಕುತ್ತಿದ್ದರು. ಅವರು ವರ್ಣ, ಜಾತಿ ಮತ್ತು ವರ್ಗಭೇದಗಳನ್ನು ಮೀರಿದವರಾಗಿದ್ದರು. ಅವರು ಎಂದೂ ಐಷಾರಾಮಿ ಬದುಕಿಗೆ ಹಾತೊರೆದವರಲ್ಲ. ಜನಸಮಾನ್ಯರ ಕೌದಿಯೇ ಅವರ ಹಾಸಿಗೆ ಮತ್ತು ಹೊದಿಕೆಯಾಗಿತ್ತು.

ಕಾರ್ಮಿಕ ನಾಯಕ !

ಅವರು ಯಾವುದೇ ಕಾರ್ಮಿಕ ಸಂಘದ ನಾಯಕರಾಗಿರಲಿಲ್ಲ. ಆದರೆ ಅನೇಕ ಕಾರ್ಮಿಕ ಸಂಘಟನೆಗಳ ನಾಯಕರು ಸಲಹೆ ಸೂಚನೆಗಾಗಿ ಅವರ ಬಳಿ ಬರುತ್ತಿದ್ದರು. ಸಮೀರವಾಡಿ ಸಕ್ಕರೆ ಕಾರ್ಖಾನೆ ಕಾರ್ಮಿಕರು ೧೧೯ ದಿನಗಳ ಮುಷ್ಕರ ನಡೆಸಿದಾಗ್ಯೂ ನಿರಾಶರಾಗಲಿಲ್ಲ. ಏಕೆಂದರೆ ಅವರಿಗೆ ಎಲ್ಲ ರೀತಿಯಿಂದ ಈ ದೇವರ ಬೆಂಬಲವಿತ್ತು.

ರಬಕವಿ ಬನಹಟ್ಟಿಯ ೧೫ ಸಾವಿರ ಕಾರ್ಮಿಕರು ಮುಷ್ಕರ ಹೂಡಿದಾಗ ದೇವರು ಅವರಿಗಾಗಿ ಅನ್ನಛತ್ರದ ವ್ಯವಸ್ಥೆ ಮಾಡುವ ಮೂಲಕ ಅವರ ಹೋರಾಟವನ್ನು ಸಬಲಗೊಳಿಸಿದರು. ಇದರಿಂದ ಗಾಬರಿಗೊಂಡ ಮಾಲೀಕರು ಸಂಧಾನಕ್ಕೆ ಮುಂದೆ ಬಂದರು. ಹುಬ್ಬಳ್ಳಿಯ ಅನೇಕ ಕಾರ್ಮಿಕ ಹೋರಾಟಗಳಿಗೆ

ಅವರು ಧನಸಹಾಯದೊಂದಿಗೆ ಬೆಂಬಲ ವ್ಯಕ್ತಪಡಿಸಿದ್ದಾರೆ. ಎಡಪಂಥೀಯ ವಿಚಾರ ಕಮ್ಮಟಗಳಿಗೆ ಅವರು ಊಟ ವಸತಿಯ ಅನುವು ಮಾಡಿಕೊಡುತ್ತಿದ್ದರು.

"ನಿಮ್ಮ ಲೆನಿನ್ ಏನಂತ ತಿಳಿದೀರಿ? ಅವನೂ ಒಬ್ಬ ದೊಡ್ಡ ಅಧ್ಯಾತ್ಮಿ! ರಷ್ಯಾದ ಸುದ್ದಿ ನೀವು ಹೇಳ್ತಿರಲ್ಲಾ; ಎಲ್ಲರೂ ಸಮಾನರು, ಸುಖಿಗಳು ಆಗಿದ್ದಾರಂತ. ಅದೇ ಅಧ್ಯಾತ್ಮ. ಅದರಿ ನಿಮಗಿಂತ ಮ್ಯಾಲಿನ ಕಮ್ಯೂನಿಸ್ಟ್ ನಾನು" ಎಂದು ಅವರು ಕಮ್ಯೂನಿಸ್ಟ್ ಸಿದ್ಧಾಂತಿ ಪಿ.ಎಸ್. ಪಾಟೀಲರಿಗೆ ಹೇಳಿದ್ದುಂಟು. ಕಮ್ಯೂನಿಸ್ಟರ ನಾಯಕತ್ವದಲ್ಲಿ ರೈತರ, ಕಾರ್ಮಿಕರ, ನೌಕರದಾರರ ವರ್ಗೀಯ ಹೋರಾಟಗಳು ನಡೆದಾಗ ಅವುಗಳಿಗೆ ಹುಬ್ಬಳ್ಳಿಯ ಗಿರೀಶ ಆಶ್ರಮದ ನೆರವು ಇದ್ದೇ ಇರುತ್ತಿತ್ತು ಎಂದು ಪಿ.ಎಸ್. ಪಾಟೀಲರು ಸ್ಮರಿಸಿದ್ದಾರೆ.

ದೇವರು ಕಮ್ಯೂನಿಸಂ ಕುರಿತು ಬಹಳ ಆಕರ್ಷಿತರಾಗಿದ್ದರು. ಇಂಚಗೇರಿಯಲ್ಲಿ ಕಮ್ಯೂನ್ ಮಾದರಿಯ ಜೀವನ ವಿಧಾನದ ಪ್ರಯೋಗ ಮಾಡಿದರು. ಸಹಕಾರಿ ಫಾರ್ಮ್ ಅನ್ನು ಕೂಡ ಅಸ್ತಿತ್ವಕ್ಕೆ ತಂದರು.

ಮಹಾದೇವಪ್ಪನವರು ಎಷ್ಟೋ ಸಲ ಜಮೀನುದಾರರ, ಜಹಗೀರುದಾರರ, ವತನದಾರರ, ದೇಸಾಯಿ, ದೇಶಪಾಂಡೆಯರ, ಪಾಟೀಲ, ಕುಲಕರ್ಣಿಯವರ ಭೂ ಒಡೆತನದ ಗುತ್ತಿಗೆ ಸುಲಿಗೆ ಶೋಷಣೆಗಳ ವಿರುದ್ಧ ಬಹುಜನರ ಪರವಾಗಿ ಬಂಡೆದ್ದಾಗಲೆಲ್ಲಾ ಅವರನ್ನು ಸೆರೆಮನೆಗೆ ಅಟ್ಟುವುದರಲ್ಲಿ ಅವರ ರಾಜಕೀಯ ವಿರೋಧಿಗಳು ಸರ್ಕಾರದ ಯಂತ್ರವನ್ನು ಬಳಸಿದ್ದಾರೆ. ಅವರ ಮೇಲೆ ಹೂಡಲಾಗಿರುವ ಕ್ರಿಮಿನಲ್ ಆಪಾದನೆಗಳಿಗೆ ಲೆಕ್ಕವಿಲ್ಲ ಎಂದು ಬಿ. ಬಸವಲಿಂಗಪ್ಪನವರು ತಿಳಿಸಿದ್ದಾರೆ. ದೇವರಾಜ ಅರಸರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾಗಿದ್ದಾಗ ಇಂಚಗೇರಿ ಮಠದ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಲು ಬಸವಲಿಂಗಪ್ಪನವರನ್ನು ಕಳುಹಿಸಿದಾಗ ಅವರು ಅಲ್ಲಿ ನೆರೆದ ಐದು ಸಾವಿರಕ್ಕೂ ಹೆಚ್ಚು ಮಂದಿ ಭಕ್ತರನ್ನು ಉದ್ದೇಶಿಸಿ ಮಾತನಾಡಿದ್ದರು.

ಹೋರಾಟವೇ ಜೀವನ

ದೇವರು ಯಾವಾಗಲೂ ಅಸತ್ಯ ಅನ್ಯಾಯದ ವಿರುದ್ಧ ಹೋರಾಡಿದರೇ ವಿನಾ ಎಂದೂ ಅವರು 'ಇಂಥವನ ಆಸ್ತಿಯನ್ನು ಮಠಕ್ಕೆ ತಂದು ಹಾಕಿರಿ' ಎಂದು ಹೇಳಲಿಲ್ಲ. ಆದರೆ ಕೆಲ ಸ್ವಾರ್ಥಿ, ಧೂರ್ತ ಗೂಂಡಾ ಜನರು ನುಸುಳಿ, ಸ್ವಾರ್ಥಕ್ಕಾಗಿ ಸಂಸ್ಥೆಯ ಹೆಸರು ಹೇಳಿಕೊಂಡು ಅನುಚಿತವಾಗಿ ವರ್ತಿಸುತ್ತಿದ್ದುದು ತಿಳಿದು ಬರುತ್ತಿದೆ. .. .. ದೇವರ ಉದಾತ್ತ ತತ್ತ್ವಾದರ್ಶಗಳಿಗೆ ಅಂಟಿಕೊಂಡು ಸನ್ಮಾರ್ಗದಲ್ಲಿ ಮುನ್ನಡೆವ ಅಸಂಖ್ಯಾತ ನಿಜ ಭಕ್ತರಿಗೆ ಕಳಂಕ ಬರಬಾರದು ಎಂದು ನೀಲಕಂಠ ದಾತಾರರು ೩೦ ವರ್ಷಗಳಷ್ಟು ಹಿಂದೆಯೆ ಎಚ್ಚರಿಸಿದ್ದಾರೆ.

ಎಂ.ಎಸ್. ಗಾಣಗಿ ಅವರು ೧೯೬೧ನೇ ಇಸ್ವಿಯ ಒಂದು ಘಟನೆಯನ್ನು ಹೀಗೆ ಜ್ಞಾಪಿಸಿದ್ದಾರೆ: [ಗೋಕಾಕ ರಾಜಕಾರಣಿಗಳ ಜೊತೆ ದೇವರು ಅಧ್ಯಾತ್ಮ ಮತ್ತು ರಾಜಕಾರಣದ ಕುರಿತು ಮಾತನಾಡಬೇಕಿತ್ತು.] 'ಆವಾಗ ಮಹಾದೇವರಿಗೆ ಸ್ವಂತ ಕಾರುಗಾಡಿ ಇದ್ದಿರಲಿಲ್ಲ. ..ಗೊತ್ತು ಮಾಡಿದ ದಿನಾಂಕಕ್ಕೆ ಬಸ್ಸಿನಿಂದ ನಮ್ಮ ಮನೆಗೆ ಬಂದರು. ಆದರೆ ಗೋಕಾಕದ ಆ ರಾಜಕಾರಣಿಗಳಿಗೆ ನಿರ್ಣಯ ಮಾಡಿದ ದಿನಾಂಕವೇ ನೆನಪು ಇದ್ದಿರಲಿಲ್ಲ. ಮಹಾದೇವರು ಒಬ್ಬರಾಗಿಯೆ ನಮ್ಮ ಮನೆಯಲ್ಲಿ ಉಳಿದರು. ಅವರಂದು ಬಹಳ ಚಡಪಡಿಸಿದರು. ಇಡೀ ಆಯುಷ್ಯದಲ್ಲಿ ಈ ಒಂದು ದಿನವನ್ನು ವ್ಯರ್ಥ ಕಳೆದೆನಲ್ಲಾ ಎಂದು.

ಅದೇ ದಿವಸ ಇನ್ನೊಂದು ಘಟನೆ. ಅಂದು ಊಟ ಮಾಡಿದರು. ಊಟವಾದ ಮೇಲೆ ಬಡೆಸೋಪು ಹಾಕಿಕೊಂಡರು. ಆವಾಗ ಕಣ್ಣುತಪ್ಪಿ ಒಂದುಕಾಳು ಬಡೆಸೋಪು ಕೆಳಗೆ ಬಿದ್ದಿತ್ತು. ಮುಂದೆ ಅರ್ಧತಾಸಿನ ನಂತರ ಆ ಕಾಳು ಅವರ ಕಣ್ಣಿಗೆ ಬಿತ್ತು. ಆವಾಗ ಆ ಬಡೆಸೋಪದ ಕಾಳನ್ನು ಎತ್ತಿಕೊಂಡು, ಅದನ್ನು ಬಟ್ಟೆಯಿಂದ ಒರೆಸಿಕೊಂಡು ಬಾಯಿಯಲ್ಲಿ ಹಾಕಿಕೊಂಡರು. ತಾತ್ಪರ್ಯ: ಒಂದು ಕಾಳನ್ನು ಸಹ ವ್ಯರ್ಥವಾಗಿ ನಾಶಮಾಡಲು ಆಸ್ಪದ ಕೊಡುತ್ತಿರಲಿಲ್ಲ. ಹಾಗೆಯೆ ಜೀವನದ ಎಲ್ಲ ಹನಿ ಕ್ಷಣಗಳು ವ್ಯರ್ಥವಾಗಬಾರದೆಂದು ಅವರ ಸಂದೇಶ.

ನಿಜವಾದ ಹೋರಾಟಗಾರರು ಬದುಕಿನ ಬಗ್ಗೆ, ಸಮಯದ ಬಗ್ಗೆ ಮತ್ತು ನಿಸರ್ಗ ಹಾಗೂ ಮಾನವ ಉತ್ಪಾದಿಸುವ ಪ್ರತಿ ವಸ್ತುವಿನ ಬಗ್ಗೆ ಲೋಕಕಲ್ಯಾಣ ದೃಷ್ಟಿಯಿಂದ ಅತೀವ ಕಾಳಜಿಯನ್ನು ಹೊಂದಿರುತ್ತಾರೆ.

'ನೋಡಿ ಈ ಕುರ್ಚಿ ನಾನೇ ಮಾಡಿದ್ದು. ಇದರ ಮೇಲೆ ಹಿಂದೆ ಸುಭಾಸಚಂದ್ರ ಬೋಸರು ಕುಳಿತು ಮಾತನಾಡಿದ್ದರು. ಅದರ ಸಂಕೇತವೇ ಇದು' ಎಂದು ದೇವರು ಹೇಳಿದ್ದಾರೆ. ಮಹಾದೇವರ ಮುಖ್ಯ ಗುರಿ ಎಂದರೆ 'ಕೆಲಸಗಾರರು ಬದುಕಲಿ' ಎನ್ನುವುದು. ಅದೇ ರೀತಿ ತಮ್ಮ ಸ್ಥೂಲ ದೇಹವಿದ್ದರೂ ದುಡಿದೇ ತಿನ್ನುವ ಹವ್ಯಾಸ. ಇದೂ ನಾ ದುಡಿದೇ ಅರಿವೆ ಹೊಲಿಸಿಕೊಂಡಿದ್ದೀನಿ ಅನ್ನುವ ಮಹಾದೇವರ ಬಗ್ಗೆ ಎಷ್ಟು ಹೇಳಿದರೂ ಕಡಿಮೆಯೆ ಎಂದು ಈಶ್ವರಿ ಇಟಗಿ ತಿಳಿಸುತ್ತಾರೆ.

ನಾಸಿಕ್ ಜೈಲಿನಲ್ಲಿ ದೇವರಿಗೆ ಕಾಮ್ರೇಡ್ ಎಸ್. ಎ. ಡಾಂಗೆ ಅವರಂಥ ಮಹಾನ್ ಕಮ್ಯೂನಿಸ್ಟರ ನಿಕಟ ಸಂಪರ್ಕ ಬಂದಿತು. ವಿಚಾರ ವಿನಿಮಯ, ಚರ್ಚೆ ಹಾಗೂ ಅಭ್ಯಾಸದಿಂದಾಗಿ ಅವರು ತಮ್ಮ ಬದುಕಿನಲ್ಲಿ ಸಮಾನತೆಯ ತತ್ತ್ವಗಳನ್ನು ಸಂಪೂರ್ಣವಾಗಿ ಅಳವಡಿಸಿಕೊಂಡರು. 'ಪೂಜೆಯಿಂದ ಪಾಪ ಪರಿಹಾರ ಮಾಡಿಕೊಳ್ಳಲು ಮಠಾಧಿಪತಿಗಳು ಬೋಧಿಸುತ್ತಾರೆ. ಆದರೆ ಶ್ರೀ ಮಹಾದೇವಪ್ಪ ಮುರಗೋಡರು ಶೋಷಣೆ ಹಾಗೂ ಅನ್ಯಾಯಗಳ ವಿರುದ್ಧ ಹೋರಾಡಿ ಜೀವನ

ಸಾರ್ಥಕಗೊಳಿಸಿಕೊಳ್ಳಲು ಉಪದೇಶ ನೀಡಿದರು' ಎಂದು ಕಾಮ್ರೇಡ್ ಬಿ. ಎಸ್. ಧಾರವಾಡಕರ ಬರೆದಿದ್ದಾರೆ. ಆ ಸಂದರ್ಭದಲ್ಲಿ ಇವರು ಕೂಡ ದೇವರು ಮತ್ತು ಡಾಂಗೆ ಅವರ ಜೊತೆ ನಾಸಿಕ್ ಜೈಲಿನಲ್ಲಿದ್ದರು.

ಸರ್ವಧರ್ಮ ಸಮಭಾವ

ಸರ್ವಧರ್ಮದ ತಿರುಳನ್ನು ಇಂಚಗೇರಿ ಸಂಪ್ರದಾಯದಲ್ಲಿ ಕಾಣಬಹುದು. ಉದಾತ್ತ ವಿಚಾರಗಳು ಎಲ್ಲಿ ಬಂದರೂ ಸ್ವೀಕಾರಾರ್ಹ ಎಂಬುದು ಈ ಸಂಪ್ರದಾಯದ ನಿಲವು. ಸದ್ಗುರು ಸಮರ್ಥ ರಾಮದಾಸ ಮಹಾರಾಜರ 'ದಾಸಬೋಧೆ' ಇವರ ಪ್ರವಚನದ ಆಧಾರ ಗ್ರಂಥ. ದಾಸಬೋಧೆ ಮರಾಠಿ ಭಾಷೆಯಲ್ಲಿದ್ದರೂ ವಿವರಣೆ ಕನ್ನಡದಲ್ಲಿ. ಹೀಗೆ ಇದು ಸರ್ವಧರ್ಮ ಸಮಭಾವದ ಕೇಂದ್ರವಾಗಿರುವಂತೆ ಭಾಷಾ ಸಾಮರಸ್ಯದ ಕೇಂದ್ರವೂ ಆಗಿದೆ. ಸಾಮಾನ್ಯರಿಗೆ ಅಸಾಮಾನ್ಯ ವಿಚಾರಗಳನ್ನು ಹೇಳಿಕೊಡುವ ಕಲೆ ಇಂಚಗೇರಿ ಸಂಪ್ರದಾಯದವರಿಗೆ ಕರಗತವಾಗಿದೆ.

ಜನರು ದೇವರ ಮಾತುಗಳನ್ನು ತನ್ಮಯತೆಯಿಂದ ಕೇಳುತ್ತಿದ್ದರು. ಅವರ ಮಾತುಗಳು ಸರಳ ಸಹಜವಾಗಿದ್ದು ಲೀಲಾಜಾಲವಾಗಿದ್ದವು. ಕಾಯಕದಿಂದ ಹೊರಗಿನ ಸ್ವಾತಂತ್ರ್ಯ ಗಳಿಸಬೇಕು; ಧ್ಯಾನದಿಂದ ಒಳಗಿನ ಸ್ವಾತಂತ್ರ್ಯ ಗಳಿಸಬೇಕು ಎಂಬುದು ಅವರ ಕರೆಯಾಗಿತ್ತು. ದೇವರು ರಾಜಕಾರಣಕ್ಕೆ ಅಧ್ಯಾತ್ಮದ ನೀತಿಯನ್ನು ಎರಕ ಹೊಯ್ಯುತ್ತಿದ್ದರು ಮತ್ತು ಅಧ್ಯಾತ್ಮಕ್ಕೆ ರಾಜ್ಯಶಕ್ತಿಯನ್ನು ನಿಭಾಯಿಸುವ ಕ್ರಮಗಳನ್ನು ಅಳವಡಿಸುತ್ತಿದ್ದರು. ಸಮರ್ಥ ರಾಮದಾಸರು ಈ ಹಿಂದೆ ಮಾಡಿದ ಇಂಥ ಪ್ರಯೋಗ ಕೂಡ ಇಂಚಗೇರಿ ಸಂಪ್ರದಾಯದ ಮೇಲೆ ಆಳವಾದ ಪರಿಣಾಮ ಬೀರಿದೆ. ಅಂತೆಯೆ ಅವರು ಲಕ್ಷಾಂತರ ಜನರನ್ನು ತಲುಪಿದ್ದಾರೆ. ನಮ್ಮಲ್ಲಿನ ಬಹುಪಾಲು ಮಹಾಜ್ಞಾನಿಗಳಿಗೆ, ಮಹಾನ್ ಕವಿಗಳಿಗೆ ಮತ್ತು ವಿವಿಧ ವಿಷಯಗಳ ತಜ್ಞರಿಗೆ ಜನಸಮುದಾಯದ ಕೂಡ ಹೇಗೆ ಮಾತನಾಡಬೇಕೆಂಬುದೇ ಗೊತ್ತಿಲ್ಲ. ವಿಶ್ವವಿದ್ಯಾಲಯಗಳ ಎಲ್ಲ ವಿಭಾಗಗಳ ವಿಷಯ ಮತ್ತು ಭಾಷೆಗಳು ಅಕಾಡಿಮಿಕ್ ತಂತ್ರಗಾರಿಕೆಯಿಂದ ಕೂಡಿದೆ. ಹೀಗಾಗಿ ಅಲ್ಲಿ ಕಲಿತವರು ಜನರೊಂದಿಗೆ ಬೆರೆಯುವುದು ಕಠಿಣ ಸಾಧ್ಯವಾಗಿದೆ. ದೇವರ ಜನತಾ ವಿಶ್ವವಿದ್ಯಾಲಯದಲ್ಲಿ ಜ್ಞಾನ ಪಡೆದವರು ವಿಶ್ವವಿದ್ಯಾಲಯಗಳಲ್ಲಿ ಓದಿದವರಿಗಿಂತ ಹೆಚ್ಚು ಸಂವೇದನಾಶೀಲರಾಗಿದ್ದಾರೆ.

ಕಾಯಕದ ಮೂಲಕ ಪ್ರಪಂಚವನ್ನು ಸುಂದರಗೊಳಿಸುತ್ತಲೇ ಪಾರಮಾರ್ಥಿಕ ಆನಂದವನ್ನು ಪಡೆಯುವುದೇ ಈ ಸಂಪ್ರದಾಯದ ಮುಖ್ಯ ಉದ್ದೇಶವಾಗಿದೆ. ೧೨ನೇ ಶತಮಾನದ ಶರಣರ ಉದ್ದೇಶವೂ ಇದೇ ಆಗಿತ್ತು.

ಅಹಂಕಾರ ಮೆಟ್ಟಿ ನಿಂತ ಕರುಣಾಳು

ದೇವರು ಮಾನವೀಯತೆಯ ಆಗರವಾಗಿದ್ದರು. ಪಾಪಿಗಳಿಗೆ ಅನಾಚಾರದ ದುಷ್ಪರಿಣಾಮಗಳ ಮನವರಿಕೆ ಮಾಡಿಸಿ ಆಚಾರದ ಸ್ವರ್ಗವನ್ನು ತೋರಿಸುತ್ತಿದ್ದರು. ದೈನಂದಿನ ಬದುಕಿನ ಅನಿವಾರ್ಯತೆಯಲ್ಲಿ ದಾರಿ ತಪ್ಪಿದ ವ್ಯಕ್ತಿಯ ಬಗ್ಗೆ ತಿಳಿದವರು ಉದಾಸೀನ ತಾಳುತ್ತ ಹೋದರೆ ಆತ ಮುಂದೊಂದು ದಿನ ಕ್ರೂರಿಯೂ ಕೊಲೆಗಡುಕನೂ ಅತ್ಯಾಚಾರಿಯೂ ಆಗಬಲ್ಲ. ತನ್ನ ಬದುಕು ಮತ್ತು ಸಾವಿನ ಮಧ್ಯೆ ಅಂತರ ಕಂಡುಕೊಳ್ಳದವ ಎಂಥ ಹೀನ ಕೃತ್ಯಕ್ಕೂ ಇಳಿಯಬಲ್ಲ. ಅಂಥ ದಾರಿತಪ್ಪಿದವರ ಮೇಲೂ ಅವರ ಕರುಣಾ ದೃಷ್ಟಿ ಬೀಳುತ್ತಿತ್ತು ಆಶ್ರಮದ ವಾತಾವರಣದಲ್ಲಿ ಅಂಥವರು ಸನ್ಮಾರ್ಗವನ್ನು ಕಂಡುಕೊಂಡ ಅನೇಕ ಉದಾಹರಣೆಗಳಿವೆ. ಅವರು ಪುರಸ್ಕಾರ ಅಥವಾ ತಿರಸ್ಕಾರಗಳ ಕಡೆ ಇರುತ್ತಿರಲಿಲ್ಲ. ಮನುಷ್ಯರು ಭೂಮಿಯ ಮೇಲೆ ಬದುಕುವಷ್ಟು ದಿನ ನೆಮ್ಮದಿಯಿಂದ ಕ್ರಿಯಾಶೀಲವಾಗಿದ್ದು ಈ ಭೂಮಿಯನ್ನು ಬದುಕಲು ಹೆಚ್ಚು ಹೆಚು ಯೋಗ್ಯವಾಗುವಂತೆ ಮಾಡುತ್ತ ಅದರ ಸೌಂದರ್ಯವನ್ನು ಹೆಚ್ಚಿಸಬೇಕು ಎಂಬುದೇ ಅವರ ಆಶಯವಾಗಿತ್ತು.

ಆಜನ್ಮ ಬ್ರಹ್ಮಚಾರಿಯಾಗಿದ್ದ ಅವರು ಜನಸಾಗರದ ಮಧ್ಯೆ ಲೋಕವೇ ತಾನಾಗಿ ಏಕಾಂತವನ್ನು ಅನುಭವಿಸುತ್ತಿದ್ದರು. ಅವರ ಧ್ಯಾನಸ್ಥ ಸ್ಥಿತಿಗೆ ಯಾವುದೂ ಅಡ್ಡ ಬರುತ್ತಿರಲಿಲ್ಲ. 'ನನ್ನೆದುರಿಗೆ ನನ್ನ ಕಡುವೈರಿಯೆ ನಿಂತಿರಲಿ, ನನಗೋ ಆತನ ಉದ್ಧಾರವೆಂದಾದೀತೆಂಬ ಚಿಂತೆ' ಎಂದು ಅವರು ಹೇಳಿದ್ದನ್ನು ಸಿದ್ಧರಾಜ ಪೂಜಾರಿ ದಾಖಲಿಸಿದ್ದಾರೆ. ಇಂಥ ಒಬ್ಬ ಮಹಾಪುರುಷ ನಮ್ಮ ಜೀವಿತಾವಧಿಯಲ್ಲಿ ಇದ್ದರೆ! ಎಂಬ ಭಾವನೆ ಮೂಡುವುದು ಸಹಜವೇ ಆಗಿದೆ.

"ದೇವರು ಮುಂಬೈನಲ್ಲಿ (೧೯೬೫) ಇದ್ದಾಗ ನನಗೆ ಮುಖ ತೊಳೆಯಲು ಬರದಂಥ ಚಿಕ್ಕ ವಯಸ್ಸು. ಆಗ ನಮ್ಮ ಮನೆಯವರು ದೇವರೊಡನೆ ಪತ್ರ ಸಂಪರ್ಕ ಇಟ್ಟುಕೊಂಡಿದ್ದರು. ಅದನ್ನು ಕಂಡಾಗ ನನಗೂ ದೇವರಿಗೆ ಪತ್ರ ಹಾಕಬೇಕು, ಅವರಿಂದ ಉತ್ತರ ಪಡೆಯಬೇಕು ಎನ್ನುವ ಹುಚ್ಚು ಆಸೆ. ಇನ್ನೂ ಒಂದನೇ ಕ್ಲಾಸಿನಲ್ಲಿದ್ದ ನಾನು ಹಾಗೂ ಹೀಗೂ ಅಕ್ಷರ ಜೋಡಿಸಿ ಪತ್ರ ಬರೆದಾಗ ನಾನಂತೂ ಅವರಿಂದ ಉತ್ತರ ನಿರೀಕ್ಷಿಸಿರಲಿಲ್ಲ. ಆದರೆ ದೇವರು ನನ್ನ ಪತ್ರಕ್ಕೆ ಅಷ್ಟೇ ಆತ್ಮೀಯತೆಯಿಂದ ಉತ್ತರಿಸಿದ್ದರು" ಎಂದು ಸುನಂದಾದೇವಿ ಹಳಿಂಗಳಿ ಬರೆದದ್ದು ಹೃದಯಸ್ಪರ್ಶಿಯಾಗಿದೆ.

ದೇವರು ಮುಂಬೈನ ಗೋರೇಗಾಂವನಲ್ಲಿದ್ದಾಗ ಸುನಂದಾರ ಕುಟುಂಬದವರು ಅವರನ್ನು ಕಾಣಲು ಹೋದರು. ನಾಲ್ಕು ದಿನ ಕಳೆದ ನಂತರ ಮರಳಿ ಬರುವಾಗ ಸಮಯದ ಅಭಾವದಿಂದಾಗಿ ಊಟ ಮಾಡಲಿಕ್ಕಾಗಲಿಲ್ಲ.

ಯಾವುದೋ ಆಸ್ಪತ್ರೆಯಲ್ಲಿ ಸಂಪ್ರದಾಯದ ಒಬ್ಬ ಸಹೋದರಿ ಇದ್ದುದರಿಂದ ಅವರನ್ನು ನೋಡಿಕೊಂಡು ಹೋಗಲೇ ಬೇಕಾದುದರಿಂದ ಊಟದ ಸಮಯವನ್ನು ಆ ಭೇಟಿಗೆ ಮೀಸಲಿಡಬೇಕಾಯಿತು. ಸುನಂದಾರ ಕುಟುಂಬದವರು ಆಸ್ಪತ್ರೆಯಿಂದ ರೈಲುನಿಲ್ದಾಣಕ್ಕೆ ಬರುವಷ್ಟರಲ್ಲಿ ದೇವರು ಪೇಡಾ, ಚೂಡಾ, ಸೇಬುಹಣ್ಣು ಮುಂತಾದವುಗಳನ್ನು ಹರಡಿಕೊಂಡು ಕುಳಿತು ಬರ್ರಿ ತಿನಬರ್ರಿ ಎಂದು ಅವರನ್ನೆಲ್ಲ ಕರೆದರು!

"ಒಂದು ದೊಡ್ಡ ಮಠದ ಗುರುವಾಗಿ ಅವರೆಂದೂ ಕಾವಿ ಧರಿಸಲಿಲ್ಲ. ಅಡ್ಡಪಲ್ಲಕ್ಕಿಯಲ್ಲಿ ಮೆರೆಯಲಿಲ್ಲ. ಹರುಕು ಮುರುಕು ಬಟ್ಟೆ ಧರಿಸಿದ ಮಾತ್ರಕ್ಕೆ ಅವರ ವ್ಯಕ್ತಿತ್ವ ಎಂದೂ ಸಣ್ಣದಾಗಲಿಲ್ಲ. ಅವರೆಂದೂ ವಿಭೂತಿ ಹಚ್ಚಲಿಲ್ಲ, ಲಿಂಗ ಧರಿಸಲಿಲ್ಲ. ಸಮಾಜವಾದದ ಹೆಸರಿನಲ್ಲಿ ಬದುಕುವ ಯಾವ ವ್ಯಕ್ತಿ ಸಹ ಇವರಂತಹ ಸಾತ್ವಿಕ ಬದುಕು ಸಾಗಿಸಲಾರ" ಎಂದು ಸುನಂದಾ ಮಾರ್ಮಿಕವಾಗಿ ಬರೆದಿದ್ದಾರೆ.

ಗೋಕಾಕ ಫಾಲ್ಸ್ ಬಳಿಯ ಕಾಡಸಿದ್ಧೇಶ್ವರ ಗುಡಿಯಲ್ಲಿ ಸಪ್ತಾಹ ಕಾರ್ಯಕ್ರಮವಿತ್ತು. ರಾತ್ರಿ ಪ್ರಾರ್ಥನೆಯ ಕೊನೆಯಲ್ಲಿ ಗೋಕಾಕ ತಾಲ್ಲೂಕಿನ ಕಡೆಯ ಒಂದು ಭಕ್ತಮಂಡಳಿಯವರು ಮಹಾದೇವರ ಕುರಿತು ಸುಂದರವಾದ ಮಹಾಮಂಗಳಾರತಿ ಪದ ಹಾಡಿದರು. ಎಲ್ಲ ಮುಗಿದ ನಂತರ ಭಕ್ತರು ಊಟಕ್ಕೆ ಹೋದರು. ದೇವರಿಗೆ ಅಲ್ಲೇ ಉಪಹಾರದ ವ್ಯವಸ್ಥೆ ಮಾಡಲಾಗಿತ್ತು. ಆದರೆ ಅವರು ಸೇವಿಸದೆ ಕುಳಿತರು. ದೇವರು ತಮ್ಮ ಗುಣಗಾನ ಕೇಳಿ ನೊಂದುಕೊಂಡಿದ್ದರು. ಕೊನೆಗೆ ಎಲ್ಲರೂ ಕ್ಷಮೆ ಕೇಳಿದರು. ನಂತರ ಅವರೆಲ್ಲರ ಆಗ್ರಹಕ್ಕಾಗಿ ತುತ್ತು ಪ್ರಸಾದ ಸ್ವೀಕರಿಸಿದರು. ತಮ್ಮ ಜೈಕಾರ ಹಾಕುವುದನ್ನು ಕೂಡ ಅವರು ಎಂದೂ ಸಹಿಸುತ್ತಿರಲಿಲ್ಲ !

ಇಂಚಗೇರಿ ಸಂಪ್ರದಾಯದ ಪ್ರಕಾರ ಭಕ್ತರೆಲ್ಲ ಗುರುಗಳಿಗೆ ಸದ್ಗುರು ಸಮರ್ಥ ಎಂದು ಕರೆಯುತ್ತಿದ್ದರು. ಬನಹಟ್ಟಿಯ ಗಿರೀಶ ಮುದ್ರಣಾಲಯದಲ್ಲಿ ಮಹಾದೇವ ಮಗದುಮ್ 'ಸಂತವಾಣಿ' ಪತ್ರಿಕೆಯ ಅಕ್ಷರ ಜೋಡಣೆ ಮಾಡುತ್ತಿದ್ದರು. ದೇವರ ಕುರಿತು ಒಂದು ಲೇಖನ ಪ್ರಕಟಿಸುವ ಸಂದರ್ಭದಲ್ಲಿ 'ಸದ್ಗುರು ಸಮರ್ಥ ಮಾಧವಾನಂದ ಪ್ರಭೂಜಿ' ಎಂದು ಮುದ್ರಿಸಲಾಯಿತು. ಪತ್ರಿಕೆ ಅವರ ಕೈಗೆ ಸಿಕ್ಕಾಗ ಹಾಗೆ ಪ್ರಕಟಿಸಿದವರು ಯಾರು ಎಂದು ಕೇಳಿದರು. ತಾವೇ ಹಾಗೆ ಬರೆದಿರುವುದಾಗಿ ಮಗದುಮ್ ತಿಳಿಸಿದರು. ಆಗ ದೇವರು ಕೆರಳಿದರು. "ಮಗನ ನಾ ಸದ್ಗುರು ಸಮರ್ಥ ಆಗೇನಿ ಅಂತ ನಿನಗ ನಾ ಹೇಳಿದಿನೇನು?" ಎಂದು ಪ್ರಶ್ನಿಸಿದರು. ಅವರಿಗೆ ಹೊಗಳಿಕೆ ಎಂದರೆ ಆಗಿ ಬರುತ್ತಿರಲಿಲ್ಲ.

ಆಶ್ರಮದಲ್ಲಿದ್ದ ಕಾಳಪ್ಪಾ ಬಡಿಗೇರ, ಹೆಂಡತಿ ಮತ್ತು ಒಂದೂವರೆ ತಿಂಗಳ ಚೊಚ್ಚಲು ಗಂಡು ಕೂಸಿನ ಜೊತೆ ದೇವರನ್ನು ಕಾಣಲು ಮುಂಬೈಗೆ ಹೋದ. ದೇವರು ಮಗುವಿನ ಹೆಸರು ಕೇಳಿದರು. 'ಮಹಾದೇವ' ಎಂದು ಉತ್ಸಾಹದಿಂದ ಹೇಳಿದಾಗ ಗಂಭೀರವಾದರು. "ಮಹಾದೇವಪ್ಪನ ಹೆಸರ ಯಾವಾಗ ನೀವು ಇಟ್ಟೀರಿ ಅಂದಮ್ಯಾಲ ಅಂವಾ ಸತ್ತಂಗ ಆಯಿತು. ಇನ್ನ ನಾ ಊಟಾ ಮಾಡೂದಿಲ್ಲ, ನಿರಾಹಾರ ಇದ್ದು ದೇಹ ಬಿಡಬೇಕು" ಎಂದು ಕೂತರು. ಪತಿ ಪತ್ನಿ ಎಷ್ಟು ಕಾಲು ಬಿದ್ದು ಕೈ ಮುಗಿದರೂ ಕೇಳಲಿಲ್ಲ. ಎರಡು ದಿನ ಉಣಲಿಲ್ಲ. ಕೂಸಿನ ದೆಸೆಯಿಂದ ಕೊನೆಗೆ ಪ್ರಸಾದ ಸ್ವೀಕರಿಸಿದರು. ಪುನಃ ಅವರೇ ಕೂಸನ್ನು ಎತ್ತಿಕೊಂಡು 'ಇವ ನನ್ನ ಗುರು. ನಾ ನನ್ನ ಗುರುವಿನ ಹೆಸರು ಕರೀತೀನಿ' ಎಂದು ಹೇಳಿ ಭಾವುಸಾಹೇಬರ ಹೆಸರಿಟ್ಟರು. ಬಸವಣ್ಣನವರ 'ಎನಗಿಂತ ಕಿರಿಯರಿಲ್ಲ' ಎಂಬ ಭಾವ ಅವರದು.

ಬಾವಿಯಿಂದ ನೀರು ಜಗ್ಗುವುದು, ಗಿಡಗಳಿಗೆ ನೀರು ಗೊಬ್ಬರ ಹಾಕುವುದು, ಕಂಟಿ ಕಡಿಯುವುದು, ಒಡ್ಡು ಹಾಕುವುದು, ಅಷ್ಟೇ ಅಲ್ಲದೆ ಮಹಾತ್ಮಾ ಗಾಂಧೀಜಿ ಅವರಂತೆ ಪಾಯಖಾನೆ ಸಹಿತ ದೇವರು ಸ್ವತಃ ಸ್ವಚ್ಛ ಮಾಡುತ್ತಿದ್ದರು. ಖಾದಿ ನೂಲುತ್ತಿದ್ದರು, ಎಂದು ವೀರಮ್ಮನವರು ತಿಳಿಸಿದ್ದಾರೆ.

"ಮಂದಿಯೆ ಅವರನ್ನು 'ದೇವರು' ಅಂತ ಕರೆದರು. ತಾವು ಮಾತ್ರ ಭಕ್ತರಂತೆ ಇದ್ದರು. ತಮಗೆ ಯಾರಾದರೂ ಸದ್ಗುರು ಅನ್ನೋದು, ಕಾಲು ಬೀಳೋದು ಅವರಿಗೆ ಸೇರುತ್ತಿರಲಿಲ್ಲ. ಸಹಜ ಕೂತರೂ ತಮ್ಮ ಪಾದಗಳನ್ನು ಧೋತರದಲ್ಲಿ ಮುಚ್ಚಿಕೊಂಡು ಕೂಡುತ್ತಿದ್ದರು. ಕಾಲು ಬೀಳಲು ಬಂದವರಿಗೆ ಹೋಗೋಗ್ರಿ, ಧ್ಯಾನಾ ಮಾಡ್ಹೋಗ್ರಿ ಅಂತ ಗದರಿಸಿ ಕಳುಹಿಸುತ್ತಿದ್ದರು."

"ಹಿಂದೊಮ್ಮೆ ಶ್ರೀಶೈಲ ಜಗದ್ಗುರು ಬಂದಾಗ ಅಷ್ಟು ದೊಡ್ಡ ದೇಹವನ್ನು ಅವರ ಪಾದಗಳಲ್ಲಿ ಅಡ್ಡಹಾಕಿ ದೀರ್ಘದಂಡ ಪ್ರಣಾಮ ಮಾಡಿದ್ದು ನಾವೇ ನೋಡಿದ್ದೇವೆ. ಅಂತಹ ಅಹಂಕಾರ ಒಣ ಪ್ರತಿಷ್ಠೆಯಾಗಲಿ, ಬೇರೆಯವರನ್ನು ಜರಿಯುವ ಹಗುರು ಭಾವನೆಯಾಗಲಿ ಎಂದೂ ಇರಲಿಲ್ಲ. ನಿಜಕ್ಕೂ ಪೂರ್ಣಜ್ಞಾನಿ ಅವರು" ಎಂದು ವೀರಮ್ಮನವರು ಮಹಾಲಿಂಗ ಮಂಗಿ ಅವರ ಪ್ರಶ್ನೆಯೊಂದಕ್ಕೆ ಉತ್ತರಿಸಿದ್ದಾರೆ.

ಸರ್ವೋದಯ ಇಲ್ಲವೆ ಸರ್ವನಾಶ

ಸರ್ವೋದಯ ತತ್ತ್ವ, ಒಕ್ಕಲುತನದ ಮಹತ್ವ, ಸ್ತ್ರೀ ಶಿಕ್ಷಣ, ದಾರುಬಂದಿ (ಸಾರಾಯಿ ನಿಷೇಧ), ಪರಸ್ತ್ರೀ-ಪುರುಷ, ಧನವರ್ಜ್ಯ, ಸತ್ಯ, ಅಹಿಂಸೆ, ಬ್ರಹ್ಮಚರ್ಯ, ಅಪರಿಗ್ರಹ, ಸರ್ವಧರ್ಮ ಸಮನ್ವಯ, ನಮ್ರತೆ, ಅಭಯ, ಗ್ರಾಮೋದ್ಯೋಗ,

ದೀನ-ದಲಿತ-ಅಬಲ ಹರಿಜನೋದ್ಧಾರ ಇವೆಲ್ಲ ಆಚರಿಸಿ, ಇನ್ನೊಬ್ಬರಿಗೂ ಅನುಸರಿಸಲು ಪ್ರೇರೇಪಿಸಬೇಕು.

ಮತಭೇದ, ತಂಟೆ, ಕೋರ್ಟಿಗೆ ಹೋಗದಂತೆ ತಡೆದು ರಾಜಿ ವ್ಯವಹಾರ ಮಾಡಿಸುವುದು. ಅಸಹಾಯಕರಿಗೆ, ದುರ್ಬಲರಿಗೆ ಸಹಾಯ ಮಾಡುವುದು. ಬಡವರಿಗೆ ಉದ್ಯೋಗ ಒದಗಿಸುವುದು. ಸಹಜೀವನ ಸಮಬಾಳ್ವೆ ನಡೆಸುವುದು. ಇವು ಪ್ರತಿಯೊಬ್ಬರ ಆದ್ಯ ಕರ್ತವ್ಯ.

ಗ್ರಾಮಸಭೆ, ಸರ್ವಸಮ್ಮತ ನ್ಯಾಯ, ಗ್ರಾಮಕೋಶ, ಶಾಂತಿಸೈನಿಕರು, ಲೋಕಸೇವಕರು, ಸ್ಥಿತಪ್ರಜ್ಞರು, ತ್ಯಾಗಿಗಳು ಇಂಥವರೆಲ್ಲ ತಯಾರಾಗಬೇಕು. ಅದರಂತೆ ತಯಾರು ಮಾಡಬೇಕು. ವಿಜ್ಞಾನವನ್ನು ಆತ್ಮಜ್ಞಾನದ ತತ್ತ್ವಕ್ಕನುಸರಿಸಿ ಗುರಿಮುಟ್ಟಬೇಕು.

ಆತ್ಮಜ್ಞಾನ, ಆತ್ಮಸಂಸ್ಕಾರವಾಗದೆ ವ್ಯಕ್ತಿ, ಸಮಾಜ, ರಾಜಕೀಯ, ಸಾಮಾಜಿಕ ಉನ್ನತಿ, ಉದ್ಧಾರ ಕಲ್ಪಿಸಲಸಾಧ್ಯ. ಅಧ್ಯಾತ್ಮದ ನೆಲಗಟ್ಟಿನ ಮೇಲೆ ರಾಷ್ಟ್ರ-ಸಮಾಜ ಕಟ್ಟಬೇಕು. ಅಧ್ಯಾತ್ಮವಾದ ವಿಜ್ಞಾನ ಶಿಕ್ಷಣ, ರಾಜಕಾರಣಗಳನ್ನು ಸಿದ್ಧಪಡಿಸಬೇಕು.

ಇಂಥ ಪರಮ ಪವಿತ್ರ ಕಾರ್ಯವನ್ನು ಸಾಧಿಸದಿದ್ದರೆ ನಮ್ಮ ಸಮಾಜವನ್ನು ಹಾಳು ಮಾಡಿದ ಪಾಪ ನಮಗೆ ತಗಲುತ್ತದೆ. ಜ್ಞಾನಯೋಗ - ಕರ್ಮ[ಕಾಯಕ]ಯೋಗ ಸಂಯೋಜನೆಯೊಂದಿಗೆ ನಿಜಗುರಿಯತ್ತ ನಡೆದು ಅದರಂತೆ ಈ ವೇದಾಂತ ಸತ್ಯವನ್ನು ಗುರುಮನೆಯಿಂದ ಗುಡಿಸಲು ಅರಮನೆಯೊಂದೂ ಬಿಡದೆ ಸರ್ವರಿಗೂ ಮುಟ್ಟಿಸಲು ಮುಂದಾಗಬೇಕು.

ಅಜ್ಞಾನ ಅಂಧಕಾರದಿಂದ ಎಚ್ಚೆತ್ತು ಯಾವ ದುಷ್ಟ ಪ್ರಲೋಭನೆಗಳಿಗೆ ಬದುಕನ್ನು ಈಡುಮಾಡದೆ ನಿತ್ಯದ ಬೆಳಕಿನೆಡೆಗೆ ಎಲ್ಲರೂ ಹೆಜ್ಜೆ ಹಾಕಬೇಕಾಗಿದೆ.

ಅಧ್ಯಾತ್ಮ ಕ್ರಾಂತಿ ಅದುವೆ ವಿಶ್ವಕ್ಕೆ ಶಾಂತಿ !
ಧ್ಯಾನ, ಧ್ಯಾನ, ಧ್ಯಾನ !

(ದೇವರು ಭಕ್ತರಿಗೆ ಬರೆದ ಪತ್ರಗಳಿಂದ ಈ ವಿಚಾರಗಳನ್ನು ಸಂಗ್ರಹಿಸಲಾಗಿದೆ.)

ದಿಕ್ಸೂಚಿ

ಮಹಾದೇವರ ಸರ್ವೋದಯ ಪರಿಕಲ್ಪನೆಯಿಂದ ಈ ದೇಶವನ್ನು ರಕ್ಷಿಸಲು ಸಾಧ್ಯ. ಈ ಸರ್ವೋದಯ ಪರಿಕಲ್ಪನೆ ಇಡೀ ಭಕ್ತಿಪಂಥದ ಸಾರವೇ ಆಗಿದೆ. ಅವರ ಸರ್ವೋದಯದ ಮಾತುಗಳು ಸುವರ್ಣಾಕ್ಷರಗಳಲ್ಲಿ ಬರೆದಿಡುವಂತಹುಗಳಾಗಿವೆ. ದೇಶದಲ್ಲಿ ಇಂದು ಬೆಳೆಯುತ್ತಿರುವ ಅಸಹಿಷ್ಣುತೆಗೆ

ಈ ಸರ್ವೋದಯದ ಚಿಂತನೆಗಳೇ ಮದ್ದು. ಈ ಮದ್ದನ್ನು ಉಪಯೋಗಿಸದೆ ದೇಶದ ಉದ್ಧಾರ ಸಾಧ್ಯವಾಗದು. ಈ ಮದ್ದಿನಲ್ಲಿ ಗುಣಕಾರಿ ಶಕ್ತಿಯೂ ಇದೆ; ಸ್ಫೋಟಕ ಶಕ್ತಿಯೂ ಇದೆ. ಇದು ದುರ್ಬಲರಿಗೆ ಶಕ್ತಿ ನೀಡುವುದು ಮತ್ತು ಶೋಷಕರ ಷಡ್ಯಂತ್ರಗಳನ್ನು ಸ್ಫೋಟಿಸುವುದು!

ದೇಶವು ಜಾತಿವಾದಿಗಳಿಂದ, ಕೋಮುವಾದಿಗಳಿಂದ, ಮೂಲಭೂತವಾದಿಗಳಿಂದ, ಉಗ್ರಗಾಮಿಗಳಿಂದ ಮತ್ತು ಬದುಕಿನ ಎಲ್ಲ ರಂಗಗಳಲ್ಲಿನ ಶೋಷಕರಿಂದ ಮುಕ್ತವಾಗಬೇಕಾದರೆ ಮತ್ತು ಹುಸಿ ಅಭಿವೃದ್ಧಿಯಿಂದ ಭಾರತದ ಬಡಜನರು ವಂಚಿತರಾಗುವುದನ್ನು ತಪ್ಪಿಸಬೇಕಾದರೆ ಸರ್ವೋದಯ ಒಂದೇ ಮಾರ್ಗವಾಗಿದೆ.

ಸರ್ವೋದಯ ಪರಿಕಲ್ಪನೆಯನ್ನು ಇಷ್ಟು ಸುಂದರವಾಗಿ ಮತ್ತು ಕಾರ್ಯಸಾಧುವಾಗಿ ಮಾಡಿದಂಥ ಇನ್ನೊಬ್ಬ ವ್ಯಕ್ತಿ ಕಾಣುತ್ತಿಲ್ಲ. ಈ ಪರಿಕಲ್ಪನೆ ಅಧ್ಯಾತ್ಮಜೀವಿಗಳಿಗೆ, ಮಠಾಧಿಪತಿಗಳಿಗೆ, ಧರ್ಮಾಧಿಕಾರಿಗಳಿಗೆ, ರಾಜಕಾರಣಿಗಳಿಗೆ, ಆಡಳಿತಗಾರರಿಗೆ, ಸಮಾಜಶಾಸ್ತ್ರಜ್ಞರಿಗೆ, ಅರ್ಥಶಾಸ್ತ್ರಜ್ಞರಿಗೆ, ತಂತ್ರಜ್ಞರಿಗೆ, ವಿಜ್ಞಾನಿಗಳಿಗೆ, ಸಾಮಾಜಿಕ ಮನೋವಿಜ್ಞಾನಿಗಳಿಗೆ, ಸಂಸ್ಕೃತಿ ಚಿಂತಕರಿಗೆ, ಸಾಹಿತಿ – ಕಲಾವಿದರಿಗೆ, ಹಳ್ಳಿಗರು ಮತ್ತು ನಗರವಾಸಿಗಳಿಗೆ ಮಾರ್ಗದರ್ಶಿಯಾಗಿದೆ. ದೇವರ ಈ ಒಂದು ಪುಟದ ಚಿಂತನೆ ದೇಶರಕ್ಷಣೆಯ ಅಗಾಧ ಶಕ್ತಿಯನ್ನು ಹೊಂದಿದೆ.

ಔದ್ಯೋಗಿಕ ಕ್ರಾಂತಿಯಾದ ಈ ಮೂರು ನೂರು ವರ್ಷಗಳ ಅವಧಿಯಲ್ಲಿ ಅಭಿವೃದ್ಧಿಯ ಹೆಸರಿನಲ್ಲಿ ಆದಂಥ ಪರಿಸರ ನಾಶ, ಜಲ ಮತ್ತು ವಾಯು ಮಾಲಿನ್ಯ ಕಳೆದ ಮೂವತ್ತು ಸಾವಿರ ವರ್ಷಗಳಲ್ಲಾದ ಹಾನಿಗೆ ಸಮನಾಗಿದೆ. ಇನ್ನು ೩೦ ವರ್ಷಗಳಲ್ಲಿ ಆಗಲಿರುವ ಹಾನಿ ಕಳೆದ ಮುನ್ನೂರು ವರ್ಷಗಳ ಹಾನಿಯನ್ನು ಮೀರಿಸಲಿದೆ.

ಅಭಿವೃದ್ಧಿಯ ಪ್ರತಿಯೊಂದು ಹಂತದಲ್ಲಿ ದೂರಗಾಮಿತ್ವ ಇಲ್ಲದ ಕಾರಣ ದೀರ್ಘ ಕಾಲದ ನಂತರ ಅದರ ಆಳವಾದ ದುಷ್ಪರಿಣಾಮ ಮಾನವ ದೇಹ, ಮನಸು ಮತ್ತು ಪರಿಸರದ ಮೇಲೆ ಆಗುತ್ತಿರುವುದರಿಂದಲೇ ಇಂದು ಮನುಷ್ಯರು ವಿಚಿತ್ರ ರೋಗಗಳಿಂದ ಬಳಲುತ್ತಿದ್ದಾರೆ. ಜಗತ್ತಿನ ಎಲ್ಲೆಡೆ ಪ್ರಕೃತಿ ವಿಕೋಪದ ವಿವಿಧ ರೂಪಗಳನ್ನು ಕಾಣುತ್ತಿದ್ದೇವೆ. ಇಂಥ ಅಭಿವೃದ್ಧಿಯು ನಮ್ಮನ್ನು ಸರ್ವನಾಶದ ಕಡೆಗೆ ಒಯ್ಯುತ್ತಿದೆ. ಆದರೆ ದೇವರ ಸರ್ವೋದಯ ನೀತಿ ಜಗತ್ತನ್ನು ರಕ್ಷಿಸುವ ಸಾಮರ್ಥ್ಯ ಹೊಂದಿದೆ.

ದೇಹತ್ಯಾಗ

೭೫ ವರ್ಷ ವಯಸ್ಸಿನ ಅವಿಶ್ರಾಂತ ಹೋರಾಟಗಾರ ಸದ್ಗುರು ಮಾಧವಾನಂದ ಪ್ರಭೂಜಿ ಮಹಾರಾಜರು ೧೯೮೦ನೇ ಮೇ ೨೫ರಂದು ಭಾನುವಾರ, ಆರೋಗ್ಯ ಸರಿ ಇಲ್ಲದಿದ್ದರೂ ಆಧ್ಯಾತ್ಮಿಕ ಕಾರ್ಯಕ್ಕೋಸ್ಕರ ಬನಹಟ್ಟಿಯಿಂದ ಹುಬ್ಬಳ್ಳಿಗೆ ಹೋದರು. ಅಂದು ಸಂಜೆ ಅಲ್ಲಿನ ಗಿರೀಶ ಆಶ್ರಮದಲ್ಲಿ ದೇಹತ್ಯಾಗ ಮಾಡಿದರು. ಅಂದೇ ಅವರ ಪಾರ್ಥಿವ ಶರೀರವನ್ನು ಇಂಚಗೇರಿ ಮಠಕ್ಕೆ ತರಲಾಯಿತು. ಲಕ್ಷಾಂತರ ಭಕ್ತಾದಿಗಳು ಅಂತಿಮ ದರ್ಶನ ಪಡೆದರು. ಆ ಸಂದರ್ಭದಲ್ಲಿ ನೂರಾರು ಜನ ಭಕ್ತರು ದುಃಖ ತಾಳದೆ ಮೂರ್ಛೆ ಹೋದರು! ಮೇ ೨೭ರಂದು ಬೆಳಿಗ್ಗೆ ೧೧ ಗಂಟೆಗೆ ೮೦ ಸಾವಿರದಷ್ಟು ಭಕ್ತಾದಿಗಳ ಸಮ್ಮುಖದಲ್ಲಿ ಅಂತಿಮ ಯಾತ್ರೆ ಜರುಗಿದ ನಂತರ ಸಮಾಧಿ ಮಾಡಲಾಯಿತು.

ದೇವರು ತಮ್ಮ ಇಡೀ ಜೀವನ ಸವೆಸಿ ನಮಗಾಗಿ ಮನುಷ್ಯತ್ವದ ಮಾರ್ಗವನ್ನು ಸಿದ್ಧಪಡಿಸಿ ಹೋಗಿದ್ದಾರೆ. ನಾವು ಆ ದಾರಿಯಲ್ಲಿ ನಡೆಯುವುದೊಂದೇ ನಮ್ಮ ಮುಂದಿನ ಗುರಿಯಾದಾಗ ಮಾತ್ರ ಈ ದೇಶ ಎಲ್ಲ ತೆರನಾದ ಅಸಹನೆ ಮತ್ತು ಹಿಂಸೆಯಿಂದ ಮುಕ್ತಿಹೊಂದಿ ಜಗತ್ತಿಗೆ ಮಾರ್ಗದರ್ಶಿಯಾಗುವುದರಲ್ಲಿ ಸಂಶಯವಿಲ್ಲ.

ಜೈ ಜಗತ್

ವಿನೋಭಾ ಭಾವೆ ಅವರೊಂದಿಗೆ ದೇವರ ಸಂದರ್ಶನ

(ವರ್ಧಾ ಜಿಲ್ಲಾದ ಪವನಾರ ಆಶ್ರಮದಲ್ಲಿ ೧೯೭೭ನೇ ಅಕ್ಟೋಬರ್ ೧ ರಂದು ನಡೆದ ಸಂದರ್ಶನ.)

ವಿನೋಬಾ : ನಿಮ್ಮ ಪಂಥವು ಯಾವುದು ಮತ್ತು ಎಲ್ಲಿರುವುದು?

ದೇವರು : ನಮ್ಮದು ಅಧ್ಯಾತ್ಮ ಪಂಥವು, ನಮ್ಮ ಇಂಚಗೇರಿ ಪಂಥವು ವಿಜಾಪುರ ಜಿಲ್ಲೆಯ ಇಂಡಿ ತಾಲ್ಲೂಕಿನಲ್ಲಿರುವುದು.

ವಿನೋಬಾ : ನಿಮ್ಮ ಗುರುಗಳು ಯಾರು ಹಾಗೂ ಅವರ ಧರ್ಮ ಯಾವುದು?

ದೇವರು : ನಮ್ಮ ಸಂಪ್ರದಾಯದ ಗುರುಗಳು ಶ್ರೀ ಸದ್ಗುರು ಸಮರ್ಥ ಗುರುಲಿಂಗಜಂಗಮ, ಭಾವುಸಾಹೇಬ, ಗಿರಿಮಲ್ಲೇಶ್ವರ ಮಹಾರಾಜರು ಆಗಿರುವರು. ನಮ್ಮ ಸದ್ಗುರುಗಳ ಶಿಷ್ಯರು ಎಲ್ಲ ಜಾತಿಯವರು, ಎಲ್ಲ ಧರ್ಮದವರಿರುವರು. ಅವರ ಧರ್ಮ ಸ್ವಧರ್ಮ

ಆಗಿರುವುದು. ಈ ನಮ್ಮ ಸದ್ಗುರುಗಳ ಶಿಷ್ಯರು ಕರ್ನಾಟಕ – ಮಹಾರಾಷ್ಟ್ರಗಳಲ್ಲಿ ೭೫ ಲಕ್ಷಕ್ಕೂ ಮಿಕ್ಕಿ ಇರುವರು.

ವಿನೋಬಾ : ನಿಮ್ಮ ದೇವರು ಯಾವುದು?

ದೇವರು : ನಮ್ಮದು ಅಭೇದ ದೇವರು; ಪರಿಪೂರ್ಣ ಆತ್ಮವೇ ದೇವರು.

ವಿನೋಬಾ : ನಿಮ್ಮ ವಯಸ್ಸು ಎಷ್ಟು?

ದೇವರು : ಅರವತ್ತೆರಡು.

ವಿನೋಬಾ : ನಿಮ್ಮ ಪಂಥದ ಉದ್ದೇಶವೇನು?

ದೇವರು : ಹಿಂದೆ ಆಗಿ ಹೋದ ರಾಮ, ಕೃಷ್ಣ, ಬುದ್ಧ, ಬಸವ, ಗಾಂಧೀಜಿಯವರು ತಮ್ಮ ಆತ್ಮಜ್ಞಾನದಿಂದ ಮನ, ಮನಿ, ದೇಶ ಉದ್ಧಾರವಾಗಬೇಕೆಂದು ತಮ್ಮ ಸರ್ವಸ್ವವನ್ನೆಲ್ಲಾ ನಮ್ಮ ಸದ್ಗುರುಗಳಿಗೆ ತ್ಯಾಗ ಮಾಡಿ, ಪ್ರತಿಯೊಬ್ಬರಿಗೆ ಅದನ್ನೇ ಹೇಳಿದರು. ಇದು ಅಲ್ಲದೆ ನಾವು ೧೯೪೨ರಿಂದ ಮಹಾತ್ಮಾಜಿಯವರ ಕರೆಗೆ ಓಗೊಟ್ಟು ಅನೇಕ ಸತ್ಯಾಗ್ರಹಗಳನ್ನು ಮಾಡಿ ಸೆರೆಮನೆ ವಾಸ ಅನುಭವಿಸಿದ್ದೇವೆ. ನಾವು ಸತ್ಯ, ಅಹಿಂಸಾ ವ್ರತಗಳಿಂದ ಹೋರಾಡಿ ನಮ್ಮ ತನು ಮನ ಧನಗಳಿಂದ ಭಾರತ ಸ್ವಾತಂತ್ರ್ಯಕ್ಕೆ ಸೇವೆ ಸಲ್ಲಿಸಿದ್ದೇವೆ. ಭಾರತಕ್ಕೆ ಸ್ವಾತಂತ್ರ್ಯ ದೊರೆತ ನಂತರ ಗಾಂಧೀಜಿಯವರು ನಮ್ಮನ್ನಗಲಿ ಕೈಲಾಸಕ್ಕೆ ತೆರಳಿದಾಗ ಸ್ವರಾಜ್ಯವು ಸ್ವಾರ್ಥಿಗಳ ಕೈಯಲ್ಲಿ ಸಿಕ್ಕು, ಪ್ರಜಾಪ್ರಭುತ್ವಕ್ಕೆ ಧಕ್ಕೆ ಬರಹತ್ತಿತು. ನಾವು ನಾಲ್ಕು ಸಲ ಸಾರ್ವತ್ರಿಕ ಚುನಾವಣೆಗಳಲ್ಲಿ ಭಾಗವಹಿಸಿ ಸ್ವಾರ್ಥಿಗಳನ್ನು ವಿರೋಧಿಸಿದ್ದಾಗಿದೆ. ನಾವು ಆತ್ಮಜ್ಞಾನದ ಭಕ್ತಿಪ್ರಸಾರಕ್ಕಾಗಿ ಐದಾರು ಒಕ್ಕಲುತನದ ಫಾರ್ಮುಗಳನ್ನು ಮಾಡಿದ್ದೇವೆ. ಅವುಗಳಲ್ಲಿ ಎಲ್ಲ ಜಾತಿಯ ೧೩೦೦ ಜನ ಸ್ತ್ರೀ–ಪುರುಷರು ಒಂದೇ ಕುಟುಂಬದವರಂತೆ ಜೀವಿಸುತ್ತಿದ್ದಾರೆ. ಇದು ಅಲ್ಲದೆ ಕರ್ನಾಟಕ–ಮಹಾರಾಷ್ಟ್ರ ರಾಜ್ಯಗಳಲ್ಲಿ ನಮ್ಮ ಸಂಪ್ರದಾಯದ ೧೩೫ ಆಶ್ರಮಗಳಿರುವವು. ಹಾಗೂ ಒಕ್ಕಲುತನಕ್ಕಾಗಿ ಎತ್ತುಗಳು, ೬೦ ಎಮ್ಮೆಗಳು, ೧೦೦ ಆಕಳು, ಆಡು, ಕುರಿ, ಎರಡು ಟ್ರ್ಯಾಕ್ಟರ್, ಮೂರು ಜೀಪು, ಎರಡು ಪ್ರಿಂಟಿಂಗ್ ಮಷಿನ್‌ಗಳು, ಒಂದು ವಾರಪತ್ರಿಕೆ ಮುಂತಾದವು ಇರುವವು.

ವಿನೋಬಾ : ಫಂಡರಪೂರ ಕ್ಷೇತ್ರದಿಂದ ನಿಮ್ಮ ಕ್ಷೇತ್ರವು ಎಷ್ಟು ದೂರ ಇರುವುದು?

ದೇವರು : ೬೨ ಮೈಲು ಅಂತರದ ಮೇಲೆ ನಮ್ಮ ಕ್ಷೇತ್ರ ಇರುವುದು. ನೀವು ಫಂಡರಪೂರಕ್ಕೆ ಆಗಮಿಸಿದಾಗ ನಾನು ಅಲ್ಲಿಗೆ ಬಂದು ಉಪನ್ಯಾಸ ಕೇಳಿದ್ದೇನೆ.

ವಿನೋಬಾ : ನನ್ನಿಂದ ನಿಮಗೆ ಯಾವ ಕಾರ್ಯವು ಬೇಕಾಗಿರುವುದು.

ದೇವರು : ನಿಮ್ಮ ಸರ್ವೋದಯದ ತತ್ತ್ವ ಮತ್ತು ನಮ್ಮ ಗುರುಗಳ ತತ್ತ್ವ ಒಂದೇ ಆಗಿರುವುದು. ನಿಮ್ಮ ಸರ್ವೋದಯದಿಂದಲೇ ಜಗತ್ತಿಗೆ ಕಲ್ಯಾಣವಾದೀತೆಂದು ನಾವು ಪೂರ್ಣ ವಿಶ್ವಾಸ ಇಟ್ಟಿರುವೆವು. ನಮ್ಮ ಪಂಥದ ಭೂಮಿ, ಆಶ್ರಮ, ಜೀಪು, ಆಶ್ರಮ ಮುಂತಾದವುಗಳನ್ನೆಲ್ಲ ಸರ್ವೋದಯಕ್ಕೆ ಒಪ್ಪಿಸಿ, ನಿಮ್ಮ ನೇತೃತ್ವದಿಂದಲೇ ನಮ್ಮ ಸಂಪ್ರದಾಯವು ಮುನ್ನಡೆಯಲೆಂದು ಆಶಿಸುತ್ತೇವೆ.

ವಿನೋಬಾ : ತಮ್ಮಂಥ ಆತ್ಮಜ್ಞಾನಿಗಳು, ಬ್ರಹ್ಮಚಾರಿಗಳು, ಸರ್ವತ್ಯಾಗಿಗಳು ಮುಂದೆ ಬಂದರೆ ಕರ್ನಾಟಕ ಅಷ್ಟೇ ಅಲ್ಲ ಇಡೀ ಭಾರತವೇ ಸರ್ವೋದಯವಾಗುವುದು. (ವಿನೋಬಾ ಅವರು ದೇವರ ವಚನವನ್ನು ಒಪ್ಪಿಕೊಂಡು ಮುಗುಳ್ನಕ್ಕರು. ಈ ಸಂದರ್ಭದಲ್ಲಿ ಎಲ್ಲ ಪ್ರಾಂತಗಳಿಂದ ಆಗಮಿಸಿದ ಕಾರ್ಯಕರ್ತರು ಹಾಗೂ ಮಹಾದೇವಿ ತಾಯಿಯವರು ಸಂತೋಷಭರಿತರಾಗಿ ಬಾಬಾರವರ ನಗುವಿನಲ್ಲಿ ಪಾಲ್ಗೊಂಡರು.)

ದೇವರು : ಪಾಕಿಸ್ತಾನ ಮತ್ತು ಭಾರತಕ್ಕೆ ಹೋರಾಟವಾದೀತೆಂದು ಜನತೆಗೆ ಅಂಜಿಕೆ ಇರುವುದು.

ವಿನೋಬಾ : ಭಾರತಕ್ಕೆ ಪಾಕಿಸ್ತಾನ ಮತ್ತು ಚೈನಾ ದೇಶದಿಂದ ಅಂಜಿಕೆ ಉಂಟು. ಈ ಎರಡೂ ಅಂಜಿಕೆಗಳನ್ನು ತಪ್ಪಿಸಬೇಕಾದರೆ ಮುಸ್ಲಿಂ ಬಾಂಧವರು ಹಿಂದುಗಳ ಪುರಾಣ ಓದಬೇಕು. ಹಿಂದೂಗಳು ಮುಸಲ್ಮಾನರ ಕುರಾನ ಓದಬೇಕು. ಅದಕ್ಕಾಗಿ ನಿಮ್ಮಂಥ ನಿಜವಾದ ಆತ್ಮಜ್ಞಾನಿಗಳು ಮುಂದೆ ಬರಬೇಕು. ಶ್ರೀಮಂತರು, ಬಡವರು ಪ್ರೇಮದಿಂದ ಸರಿಯಾಗಿ ಹಂಚಿಕೊಂಡು ಉಣ್ಣಬೇಕೆಂಬುದೆ ಚೀನಾದವರ ಪ್ರಶ್ನೆಯಾಗಿದೆ. ಇದರ ಸಲುವಾಗಿ ಗ್ರಾಮದಾನ, ಗ್ರಾಮಸ್ವರಾಜ್ಯ ಕಟ್ಟಲಿಕ್ಕೆ ತ್ಯಾಗಿಗಳೂ ಆತ್ಮಜ್ಞಾನಿಗಳೂ ಸಿದ್ಧರಾಗಬೇಕು.

(ಕೃಪೆ: ಮಹಾಲಿಂಗ ಮಂಗಿ ಅವರು ಸಂಪಾದಿಸಿದ ಮಾಧವ ಜೀವನ ದರ್ಶನ)



ಶ್ರೀ ಸದ್ಗುರು ಸಮರ್ಥ ರೇವಣಸಿದ್ಧೇಶ್ವರ ಮಹಾರಾಜರು
ಶ್ರೀ ಕ್ಷೇತ್ರ ಇಂಚಗೇರಿ ಮಠ

ಜೈ ಜಗತ್. ಜಾತಿ-ಧರ್ಮ-ದೇಶದ ಎಲ್ಲೆ ಮೀರಿ, ಸಕಲ ಜೀವಾತ್ಮಗಳ ಮೇಲೆ ಸದಾ ಕರುಣೆ ತೋರುವ ಬುದ್ಧ ಬಸವ ಗಾಂಧೀಜಿ ಮಾರ್ಕ್ಸ್‌ನ ಸಮಾಜೋದ್ಧಾರಕ ತತ್ತ್ವಗಳನ್ನು ಎತ್ತಿ ಹಿಡಿಯುವ ಇಡೀ ಮಾನವ ಕುಲಕ್ಕೆ ಜಯವಾಗಲಿ, ಶುಭವಾಗಲಿ ಎಂಬುದು ಶ್ರೀ ಸದ್ಗುರು ಸಮರ್ಥ ಮಾಧವಾನಂದ ಪ್ರಭುಜಿ ಅವರ ಉದ್ಘೋಷಣೆಯಾಗಿತ್ತು.

ಅಶಕ್ತರಿಗೆ ಶಕ್ತಿಯಾಗಿ, ನಿರಾಶ್ರಿತರಿಗೆ ಆಶ್ರಿತರಾಗಿ, ದುರ್ಬಲರಿಗೆ ಬಲವಾಗಿ, ಅಬಲೆಯರಿಗೆ ಆಶಾಕಿರಣವಾಗಿ, ಅಸಂಘಟಿತರ ಸಂಘಟಕರಾಗಿ, ದೀನ ದಲಿತರ ದುಃಖ ದುಮ್ಮಾನಗಳಿಗೆ ಸದಾ ಸ್ಪಂದಿಸುವ ಧ್ವನಿಯಾಗಿ, ಒಡೆದ ಮನ-ಮನೆಗಳನ್ನು ಬೆಸೆಯುತ್ತ ಅಧ್ಯಾತ್ಮ ಬೋಧಿಸಿದ ತತ್ತ್ವಜ್ಞಾನಿಯಾಗಿ, ಬ್ರಿಟಿಷ್ ಆಳ್ವಿಕೆಗೆ ಸಿಂಹಸ್ವಪ್ನವಾಗಿ, ಛಿದ್ರವಾಗಿದ್ದ ಪ್ರಾಂತಗಳನ್ನು ಒಂದುಗೂಡಿಸಿ ಕರ್ನಾಟಕ ಕಟ್ಟಿದ ಶಿಲ್ಪಿಯಾಗಿ, ಗೋವಾ ವಿಮೋಚನೆಯ ರೂವಾರಿಯಾಗಿ ಕ್ರಾಂತಿಕಾರಿ ಚಟುವಟಿಕೆಗಳಿಂದ ಶಾಂತಿ ಸ್ಥಾಪಿಸಿದಂತಹ ಒಬ್ಬ ಅಪರೂಪದ ಸದ್ಗುರು ಶ್ರೀ ಮಾಧವಾನಂದರು.

ಅರಮನೆಯಂಥ ಮನೆ ಕಟ್ಟಿಸಲಿಲ್ಲ. ಪೀಠ ಪಲ್ಲಕ್ಕಿಯಲ್ಲಿ ಕೂಡಲಿಲ್ಲ. ಛತ್ರ ಚಾಮರದ ವೈಭವ ಮೆರೆಯಲಿಲ್ಲ. ಬೆಲೆ ಬಾಳುವ ಪೋಷಾಕುಗಳನ್ನು ಧರಿಸಲಿಲ್ಲ. ಪಾದಪೂಜೆ ಮಾಡಿಸಿಕೊಳ್ಳಲಿಲ್ಲ. ಬದಲಾಗಿ ಸುಕ್ಕಾದ ಖಾದಿ ಬಟ್ಟೆ, ಗಾಂಧಿ ಟೋಪಿ ಧರಿಸಿ, ಗುಡಿಸಲುಗಳಲ್ಲಿ ನೆಲೆಸಿ, ಬಡವರ-ದೀನದಲಿತರ ಜೊತೆ ಬದುಕಿ 'ದೇವರು' ಎಂದೇ ಪ್ರಸಿದ್ಧರಾದರು.

ಸ್ವಾಗತ ಸಮಿತಿ

ಅಧ್ಯಕ್ಷರು: ರಾಜು ಅಲಗೂರ, ಶಾಸಕರು
ಕಾರ್ಯಾಧ್ಯಕ್ಷರು: ಮಹಾದೇವ ಹೊರಟ್ಟಿ
ಉಪಾಧ್ಯಕ್ಷರು: ಅರವಿಂದ ದಳವಾಯಿ
ಪ್ರಧಾನ ಕಾರ್ಯದರ್ಶಿ: ಚನ್ನಬಸಪ್ಪ ಕರಡೆಣ್ಣವರ
ಸಂಘಟನಾ ಕಾರ್ಯದರ್ಶಿ: ಧರ್ಮರಾಜ ನಾಯಕ
ಕಾರ್ಯದರ್ಶಿ: ಮುಕುಂದ ಪಂಪಕವಿ ಬೆಳಗಲಿ



ಮುದ್ರಣ ಸೇವೆ:
ಶ್ರೀಮತಿ ದಾಕ್ಷಾಯಣಿ ಬಸವರಾಜ ಹುಬ್ಬಳ್ಳಿ,
ಅಧ್ಯಕ್ಷರು ಕರ್ನಾಟಕ ರಾಜ್ಯ ಬಾಲವಿಕಾಸ ಅಕಾಡೆಮಿ,
ಧಾರವಾಡ.